
ಕಲ್ಯಾಣ ಕಿರಣ

ಬೆಲೆ : 3 ರೂ.

ಶ್ರೀ

ಸಪ್ಟಂಬರ್, 1993



ಕಲ್ಯಾಣ ಕಿರಣ

ಮಾಸಪತ್ರಿಕೆ, ಸಪ್ಟಂಬರ್-1993, ಬಿಡಿ ಸಂಚಿಕೆ 3-00 ರೂ.

ಸಂಪುಟ : 22 ಸಂಚಿಕೆ : 5 ಬಸವ ಶಕೆ : 888.
ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300-00

ಮುಖಪುಟ : 62 ವರ್ಷಗಳನ್ನು ಪೂರೈಸಿ 63ನೇ ವರ್ಷಕ್ಕೆ ಪಾದಾರ್ಪಣ ಮಾಡಿದ
ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿ.

ಬೆಂಗಳೂರು ವಿಳಾಸ : ಕಲ್ಯಾಣ ಕಿರಣ ಮಾಸ ಪತ್ರಿಕೆ, ಬಸವ ಮಂಟಪ, 2035,
2ನೇ ಬ್ಲಾಕ್, 20 ನೇ ಮುಖ್ಯರಸ್ತೆ, ರಾಜಾಜಿನಗರ,
ಬೆಂಗಳೂರು-10. ದೂರವಾಣಿ : 325335.

KALYANA KIRANA - monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074. Phone : 437234

ಕಲ್ಯಾಣ ಕಿರಣ

ಸಂಪುಟ : ೨೨ ಸಂಚಿಕೆ : ೫ ಬಸವ ಶಕೆ : ೮೮೮ ಸೆಪ್ಟಂಬರ ೧೯೯೩

ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶರಿಗೆ ನಮನಗಳು

ಜೈ ಗುರುವೆ ಜೈ ಗುರುವೆ
ಲಿಂಗಾನಂದ ಮಹಾಜಗದ್ಗುರುವೆ ॥ ಪಲ್ಲವಿ ॥

ಹಾಡುವೆವು ನಾವು ಸಂತೋಷದಿಂದ
ಶರಣರ ಬಳಗಕ್ಕೆ ಪರಮಾನಂದ
ಬಸವ ಧರ್ಮದ ಪೀಠ ವಿರುತ್ತಲಿಂದು
ತಂದಿರೆಲ್ಲರಿಗೂ ಚಂದದಾನಂದ ॥ ಜೈ ಗುರುವೆ ॥ ೧

ಶರಣೆ ಕಲ್ಲಮ್ಮ ಮಲ್ಲಪ್ಪರ ಒಡಲಲ್ಲಿ
ಜನಿಸಿದಿರಿ ನೀವು ಮಣಿಗವಳ್ಳಿಯಲಿ
ಸಂಗಮೇಶನೆಂಬ ನಾಮವ ತಳೆದು
ಬೆಳೆದಿರಿ ಬಸವನ ಚಿತ್ಕಿರಣವಾಗಿ ॥ ಜೈ ಗುರುವೆ ॥ ೨

ಬಲ್ಲಿದ ಬಸವನ ಹೆಸರನು ಉಳಿಸಲು
ವಚನ ವಾಙ್ಮಯದ ಸೌರಭವ ಹರಡಲು
ಸಂಚರಿಸಿ ನೀವು ದಿವ್ಯ ಜಂಗಮವಾಗಿ
ಶರಣ ಧರ್ಮದ ಮಹಿಮೆ ಬೀರಿದ ಯೋಗಿ ॥ ಜೈ ಗುರುವೆ ॥ ೩

ಅನುಭವ ಮಂಟಪಕೆ ಅಕ್ಕಮಹಾದೇವಿ
ಬಸವ ಮಂಟಪಕಿಂದು ಮಾತೆ ಮಹಾದೇವಿ
ಮೂಡಿ ನಿಂತಿತು ಆ ಬಸವ ಕಲ್ಯಾಣ
ಕೂಡಲ ಸಂಗಮವಾಯ್ತು ನವ ಕಲ್ಯಾಣ ॥ ಜೈ ಗುರುವೆ ॥ ೪

ಬಸವ ಮಹಾಮನೆಯ ಕಟ್ಟಿದಿರಿ ತಾವು
ಬಸವ ಭಕ್ತರಿಗೆಲ್ಲ ದೊರಕಿತು ಠಾವು
ನಾವೆಲ್ಲ ಕೂಡಿ ಜಯಘೋಷ ಮಾಡಿ
ನಲಿವೆವು ತಮ್ಮನ್ನು ಹಾಡಿ, ಕೊಂಡಾಡಿ ॥ ಜೈ ಗುರುವೆ ॥ ೫

ರಚನೆ : **ಶರಣೆ ಅನ್ನಪೂರ್ಣ ಮನ್ನಾಪುರ, ಧಾರವಾಡ**

ಮನೆಯ ಹೆಂಡತಿಯನ್ನು ಅಲಂಕರಿಸಿ

—ಮಾತಾಜಿ

ಒಬ್ಬ ಪುರುಷನಿದ್ದಾನೆ. ಅವನಿಗೆ ವಿವಾಹ ಮಾಡಲಾದ ಹೆಂಡತಿ ಅತ್ಯಂತ ಚೆಲುವೆ. ಆದರೂ ಮನೆಯ ಹೆಂಡತಿ ಬಗ್ಗೆ ಮಕ್ಕಳಾಗುತ್ತ, ಸಂಸಾರ ಸಾಗುತ್ತ ಬಂದಂತೆ ತುಸು ಉದಾಸೀನ. ಅವನ ಕಣ್ಣಿಗೆ ಇತರರು ಚೆನ್ನಾಗಿ ಕಾಣುತ್ತಾರೆ ಎಂದುಕೊಳ್ಳಿರಿ. ಹಾಗೆಂದು ಕಣ್ಣಿಗೆ ಬಿದ್ದ ಚೆಲುವೆಯರ ಬೆನ್ನುಹತ್ತುವುದೆ ? ಸಭ್ಯ ಗೃಹಸ್ಥನ ಲಕ್ಷಣವಿದಲ್ಲ. ತನ್ನ ಪತ್ನಿ ಧರ್ಮ ಸಾಕ್ಷಿಯಾಗಿ ಕೈಹಿಡಿಯಲ್ಪಟ್ಟವಳು. ಕುರೂಪಿಯೇ ಇದ್ದರೂ ಸುರೂಪಿ ಎಂದು ಸಭ್ಯರು ಭಾವಿಸಬೇಕು. ಅಂಥಾದ್ದರಲ್ಲಿ ಚೆಲುವೆಯಾದ ಹೆಂಡತಿ ಇದ್ದೂ ಅವಳನ್ನು ಸುಸ್ಥಿತಿಯಲ್ಲಿಡದೆ ಎಲ್ಲೆಲ್ಲಿಗೋ ಹರಿದಾಡುವುದು ಸೂಕ್ತವೆ ? ದಾರಿಯಲ್ಲಿ ಹೋಗುವ ಹೆಂಗಸೊಬ್ಬಳು ಉಟ್ಟ ಸೀರೆ ತುಂಬಾ ಹಿಡಿಸಿತು ಎಂದು ಆಕೆಯನ್ನೇ ತನ್ನ ಪತ್ನಿ ಎಂದು ಭಾವಿಸಲಾದೀತೆ ? ಆ ಸೀರೆಯನ್ನು ಕೊಂಡು ತಂದು ಹೆಂಡತಿಗೆ ಉಡಿಸಿ ಆನಂದಿಸಬೇಕು. ಸುಂದರವಾದ ಮೊಗ್ಗಿನ ಜಡೆ ಹೆಣೆದುಕೊಂಡು ಓರ್ವ ತರುಣಿ ಹೋಗುತ್ತಿದ್ದರೆ ಜಡೆ ಇಷ್ಟವಾಯಿತೆಂದು ಆಕೆಯ ಬೆನ್ನುಹತ್ತಬಾರದು. ಆ ಮೊಗ್ಗುಗಳನ್ನು ತಂದು ಹೆಂಡತಿಗೂ ಜಡೆ ಹಾಕಿಸಿ ನೋಡಿ ಹರ್ಷಿಸಬೇಕು. ಇದೇ ಸಭ್ಯ ಗಂಡಸಿನ ನಡೆ.

ಧರ್ಮಗುರು ಬಸವಣ್ಣನವರು ಒಂದು ವಚನದಲ್ಲಿ ಎರಡು ಮಾತುಗಳನ್ನು ಹೇಳಿ, ಹೋಲಿಕೆ ಕೊಡುತ್ತಾರೆ.

'ಅರಸನ ಕಂಡು ಪುರುಷನ ಮರೆದಂತಾಯಿತ್ತು'
'ಮರನನೇರಿ ಕೈಯ ಬಿಟ್ಟಂತಾಯಿತ್ತು'

ಊರ ಹೆದ್ದಾರಿಯಲ್ಲಿ ರಾಜನ ಒಂದು ದೊಡ್ಡ ಮೆರವಣಿಗೆ ಸಾಗಿದೆ. ಅನೇಕರು ಗಂಡಸರು, ಹೆಂಗಸರು, ಮುದುಕರು, ಹುಡುಗರು ಕುತೂಹಲದಿಂದ ನೋಡುತ್ತಿದ್ದಾರೆ. ಓರ್ವ ಮಹಿಳೆ ಮೆರವಣಿಗೆಯಲ್ಲಿರುವ ಅರಸನನ್ನು ನೋಡಿದಳು. "ಎಂಥಾ ಚೆಲುವ ! ಇವನು ಬಹು ಸುಂದರವಾಗಿ ಅಲಂಕರಿಸಿಕೊಂಡಿದ್ದಾನೆ. ಬೆಲೆ ಬಾಳುವ ಬಟ್ಟೆ-ಆಭರಣ ತೊಟ್ಟಿದ್ದಾನೆ." ನೋಡುತ್ತಾ ನೋಡುತ್ತಾ ಮಾರು ಹೋದಳು. ಮೆರವಣಿಗೆಯ ಹಿಂದೆಯೇ ಹೋದಳು. ಅರಸನನ್ನು ಮಾನಸಿಕವಾಗಿ ಪತಿಯನ್ನಾಗಿ ಸ್ವೀಕರಿಸಿ, ಪರವಶಳಾಗಿ ಅರಮನೆ ಬಾಗಿಲಿಗೆ ಹೋದಳು. ಅರಸು ಪರಿವಾರ ಬಾಗಿಲು ದಾಟಿತು. ಈಕೆಯನ್ನು ದ್ವಾರಪಾಲಕರು ತಡೆದರು. ಹೇಳಿದಳು, "ನಾನು ರಾಜನನ್ನು ಮಾನಸಿಕವಾಗಿ ವರಿಸಿದ್ದೇನೆ. ಒಳಗೆ ಬಿಡಿ...." "ಮೂರ್ಖ ಹೆಂಗಸೆ, ಪತಿಯನ್ನು

ಬಿಟ್ಟು ಬಂದೆಯಾ ? ನಡೆ ನಡೆ ಅವಿವೇಕಿ" ಎಂದು ಬೈದು ಕಳಿಸಿದರು, ತನ್ನ ತಪ್ಪಿನ ಅರಿವಾಗಿ ಮರಳಿ ಬಂದು ಗಂಡನ ಮುಂದೆ ಪಶ್ಚಾತ್ತಾಪದಿಂದ ಅತ್ತಳು. ಅವನು ಒಳ್ಳೆಯವನು, ವಿವೇಕಿ (ರಾಮನಂತೆ ಸಣ್ಣ ಮನಸ್ಸಿನವನಲ್ಲ) ಕ್ಷಮಿಸಿ ಕರೆದುಕೊಂಡ. ಅದು ಅವನ ದೊಡ್ಡತನ. ಆದರೆ ಆಕೆ ತನ್ನ ಪುರುಷ—ಧರ್ಮಸಾಕ್ಷಿಯಾಗಿ ಕೈಹಿಡಿದ ಗಂಡನನ್ನು ತೊರೆದು ಹೋದುದು ಮೂರ್ಖತನ.

ಒಬ್ಬ ಮಗನಿದ್ದಾನೆ, ತನ್ನ ತಾಯಿ ಸದೃಢಳು ಆರೋಗ್ಯಕಾಯಳು ಕಷ್ಟಜೀವಿಯೂ ಆಗಿದ್ದಾಳೆ. ಕಷ್ಟಪಟ್ಟು ಕಳಕಳಿಯಿಂದ ಮಗನನ್ನು ಬೆಳೆಸಿದ್ದಾಳೆ. ಅಂಥ ತಾಯಿಗೆ, ಈಗ ದುಡಿಯುತ್ತಿರುವ ಮಗನಾದವನು ಚೆನ್ನಾಗಿ ಉಣ್ಣಿಸಿ, ಉಪಚರಿಸಿ ಪುಷ್ಟಳನ್ನಾಗಿ ಮಾಡಬೇಕೋ ಅದು ಬಿಟ್ಟು ಎದುರು ಮನೆಯಲ್ಲೋ, ಪಕ್ಕದ ಮನೆಯಲ್ಲೋ ಪರಿಪುಷ್ಟಳಾದ, ಕಷ್ಟ ಜೀವಿಯಲ್ಲದ ದುಂಡು ದುಂಡಾಗಿ ಬೆಳೆದ ಓರ್ವ ಮಹಿಳೆಯಿದ್ದರೆ ಆಕೆಯನ್ನೇ ತಾಯಿ ಎಂದು ಭಾವಿಸಿ ಉಪಚರಿಸಲು ಹೋಗಬೇಕೊ? !

ಸ್ವಧರ್ಮದ ಮರ್ಮವನ್ನರಿಯದೆ ಕಂಡ ಕಂಡ ಮಾರ್ಗಗಳಿಗೆ ಹರಿದಾಡುವ ಲಿಂಗವಂತ ಧರ್ಮೀಯರನ್ನು ಕಂಡು ನನಗೆ ಈ 3 ಹೋಲಿಕೆಗಳು ನೆನಪಿಗೆ ಬರುತ್ತಿವೆ. ವಚನ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಧರ್ಮದ ರೂಪುರೇಷೆ ನೋಡಿದರೆ ಇದು ಪರಿಪೂರ್ಣ ಧರ್ಮ. ಧರ್ಮಗುರು-ಸರ್ವಾಂಗ ಪರಿಪೂರ್ಣ ಬಹುಮುಖ ವ್ಯಕ್ತಿತ್ವ ಉಳ್ಳ ಬಸವಣ್ಣ, ತತ್ತ್ವಗಳೋ ಒಂದಕ್ಕಿಂತ ಒಂದು ಶ್ರೇಷ್ಠ, ಪ್ರಗತಿಪರ, ವೈಚಾರಿಕ. ಸಾಹಿತ್ಯವು ಅಷ್ಟೇ ಅದ್ಭುತ. ಸಮಾಜಶಾಸ್ತ್ರ ಅಮೂಲ್ಯ, ಯೋಗವಂತೂ ಅಪ್ರತಿಮ. ಇಷ್ಟೆಲ್ಲ ಇದ್ದು ಸಹಜಯೋಗ, ಸಿದ್ಧಯೋಗ, ಬ್ರಹ್ಮಕುಮಾರಿ, ಸಾಯಿಬಾಬಾ,- ಹೀಗೆ ಪರದಾಡುವ ಲಿಂಗವಂತರನ್ನು ಕಂಡು ಹೆಂಡತಿಯ ಚೆಲುವನ್ನು ನಿರ್ಲಕ್ಷಿಸುವ ಗಂಡನ ನೆನಪು ಬರುತ್ತದೆ, ತಾಯಿಯ ತ್ಯಾಗ-ಪರಿಶ್ರಮಗಳನ್ನು ಮರೆತ ಮಗನ ನೆನಪು ಬರುತ್ತದೆ. ಅರಸನ ಕಂಡು ಪುರುಷನ ಮರೆದವಳ ನೆನಪಾಗುತ್ತದೆ.

ಒಂದು ಕಾಲದಲ್ಲಿ ಬಾಳಿ ಬೆಳಗಿದ ಸಾಮ್ರಾಜ್ಯವು ಮಣ್ಣಿನಲ್ಲಿ ಹುಗಿದು ಹೋಗಿರುತ್ತದೆ ಎಂದುಕೊಳ್ಳಿರಿ. ಆಗ ಉತ್ಖನನ ಕಾರ್ಯವನ್ನು ಮಾಡುತ್ತ ಮಾಡುತ್ತಾ ಹೋದಂತೆ ಗತಕಾಲದ ವೈಭವವೆಲ್ಲ ಬಿಚ್ಚಿಕೊಳ್ಳುತ್ತ ಹೋಗುವುದಷ್ಟೆ. ಇಂದು ವಚನ ಸಾಹಿತ್ಯವನ್ನು ಉತ್ಖನನ ಮಾಡುತ್ತ ಹೋದಂತೆಯೂ ಅದೇ ಅನುಭವ ! ಇಲ್ಲಿ ಏನಿಲ್ಲ, ಏನಿದೆ ? ಬದುಕಿಗೆ ಬೇಕಾದುದೆಲ್ಲ ಇದೆ. ಮಾನವನನ್ನು ಪರಿಪೂರ್ಣನನ್ನಾಗಿ ಮಾಡಲು ಬೇಕಾದುದೆಲ್ಲ ಇದೆ.

ದಿ. 24-7-93 ರಂದು ಓರ್ವರು ಬಂದರು. ಅವರು ಸಾತ್ವಿಕರು, ಸದ್ಗುಣಿಗಳು, ಅಧ್ಯಾತ್ಮ ಜೀವಿಗಳು ಎಂಬುದನ್ನು ನೋಡುತ್ತಲೇ ಗುರುತಿಸಬಹುದಿತ್ತು.

ಜನ್ಮತಃ ಲಿಂಗಾಯತರು, ಸಮಾಜದ ಅಭಿಮಾನವೂ ಇತ್ತು. ಆದರೆ ತನ್ನ ಧರ್ಮದಲ್ಲಿ ಏನೂ ಇಲ್ಲ; ಇಲ್ಲಿ ಇಲ್ಲದ್ದು ಸಿದ್ಧಯೋಗದಲ್ಲಿದೆ, ಬ್ರಹ್ಮಕುಮಾರಿ ಪಂಥದಲ್ಲಿದೆ ಎಂಬುದವರ ನಂಬಿಕೆ.

"ಸಿದ್ಧಯೋಗದಲ್ಲಿ ಗುರುವು ಶಿಷ್ಯನನ್ನು ಶಕ್ತಿಪಾತದ ಮೂಲಕ ಅನುಗ್ರಹಿಸು ವನು, ಸ್ಪರ್ಶ–ನೋಟ ಸಂಕಲ್ಪಗಳ ಮೂಲಕ ತನ್ನ ಆಧ್ಯಾತ್ಮಿಕ ಶಕ್ತಿಯನ್ನು ದಯಪಾಲಿಸುವನು. ಗುರುವು ಯೋಗ್ಯನಿರಬೇಕು ; ಅಂದಾಗ ಅನುಗ್ರಹಿಸಲು ಸಾಧ್ಯ" ಅವರು ಮೆಚ್ಚುಗೆಯಿಂದ ನುಡಿದರು. "ಇದು ನಮ್ಮಲ್ಲಿ ಇಲ್ಲ" ಎಂಬ ಭಾವ ಸೂಚ್ಯವಾಗಿ ಇತ್ತು ಅವರ ಮಾತಿನಲ್ಲಿ "ಅಹುದು....ಈ ಶಕ್ತಿಪಾತ ತತ್ತ್ವವನ್ನು ಇಷ್ಟ ಲಿಂಗ ದೀಕ್ಷಾಕ್ರಿಯೆಯಲ್ಲಿ ಅಳವಡಿಸಲಾಗಿದೆ. ಹಸ್ತಮಸ್ತಕ ಸಂಯೋಗ ಸ್ಪರ್ಶ ಮೂಲಕ ಇಷ್ಟಲಿಂಗ ತ್ರಾಟಕದ ಮೂಲಕ ನೋಟದಿಂದ ಗುರುವು ಚಿತ್ಕಳೆ ತುಂಬುವನು. ಸಂಕಲ್ಪ ಮೂಲಕ ಅನುಗ್ರಹಿಸುವನು. ವೇಧಾ–ಮಂತ್ರ–ಕ್ರಿಯಾ ದೀಕ್ಷೆಗಳ ಮೂಲಕ ಶಕ್ತಿ ಪಾತವಿದೆ. ಗುರುವು ಆಚಾರ–ಅರಿವು–ಅನುಭಾವಗಳ ಸಂಗಮವಾಗಿರಬೇಕು, ಸಮರ್ಥ ನಿರಬೇಕು." ನಾನು ವಿವರಿಸಿದೆ.

"ನಿಜವಾಗಿಯೂ ಇದೆಲ್ಲವೂ ಇದೆಯೆ ?" ಅವರು ಚಕಿತರಾದರು. ಆದಿ ಗುರು ಬಸವಣ್ಣನವರು ಮತ್ತು ಅವರ ಸಮಕಾಲೀನರು ಯೋಗ ಸಾಧನೆಯಲ್ಲಿ ಸಹ ಎಂತಹ ಪ್ರಯೋಗಗಳನ್ನು ಮಾಡಿ ವಚನ ಸಾಹಿತ್ಯವನ್ನು ಬರೆದ್ದಿಟ್ಟು ಹೋದರು. ಇದನ್ನು ಅರಿಯದ ದುರ್ದೈವಿಗಳು ಅವರ ಅನುಯಾಯಿಗಳು. ಹುಟ್ಟಿದ ಕೂಸಿಗೆ ಯಾಂತ್ರಿಕ ವಾಗಿ ಮಾಡುವ ಲಿಂಗಧಾರಣೆ ನಂತರ ಅಯ್ಯನವರ ವಟುಗಳಿಗೆ ಮಾಡುವ ಅಯ್ಯಾ-ಚಾರ, ಬರೀ ಒಣ ಮಡಿಯ ಪ್ರಸಾದ ದೀಕ್ಷೆ ಇವನ್ನೇ ನೋಡಿ ನೋಡಿ ಲಿಂಗಾಯತ ಧರ್ಮದಲ್ಲಿ ಆಧ್ಯಾತ್ಮಿಕತೆಯೇ ಇಲ್ಲವೇನೋ ಎಂದು ಬಹುಪಾಲು ಜನ ತಿಳಿದಿರುವುದ ರಲ್ಲಿ ವಿಶೇಷವೇನೂ ಇಲ್ಲ. ಇಲ್ಲಿರುವ ಆಧ್ಯಾತ್ಮಿಕ ಅಭೀಪ್ಸೆ, ಉತ್ಕಟ ಭಾವಸಂಪತ್ತು ಬೇರೆ ಕಡೆ ಕಾಣಸಿಗುವುದು ದುರ್ಲಭ.

"ಬ್ರಹ್ಮಕುಮಾರಿಗಳ ರಾಜಯೋಗದಲ್ಲಿ ಧ್ಯಾನಕ್ಕೆ ಪ್ರಾಮುಖ್ಯತೆ ಇದೆ. ನಮ್ಮಲ್ಲಿ ಇಲ್ಲವೇ ಇಲ್ಲ...." ಎಂದು ಹೇಳಿದರು.

"ನಮ್ಮಲ್ಲಿ ಇಲ್ಲ ಎನ್ನುವುದು ಯೋಗ್ಯವಲ್ಲ. ನೀವು ತಿಳಿದಿಲ್ಲ ಎನ್ನಿ ಅಥವಾ ಯಾರೂ ನಿಮಗೆ ತಿಳಿಸಿಕೊಟ್ಟಿಲ್ಲ ಎನ್ನಿರಿ...." ನಾನು ನುಡಿದೆ. "ಅಹುದು ಅದೂ ಸರಿ..." ಒಪ್ಪಿಕೊಂಡರು.

"ಇಷ್ಟಲಿಂಗ ಯೋಗವಾದ ಶಿವಯೋಗ ಎಲ್ಲ ಯೋಗಗಳ ಸಾರವನ್ನೊಳ

ಗೊಂಡಿದೆ. ಲಿಂಗಪೂಜೆಯಲ್ಲಿ 5 ಹಂತಗಳಿವೆ. ಅಷ್ಟವಿಧಾರ್ಚನೆ-ಇದು ಭಕ್ತಿ-ಯೋಗದ ಜೀವಾಳ. ಇಲ್ಲಿ ಭಕ್ತನು ಶರಣಾಗತ ಭಾವನೆಯಿಂದ ಕರ್ತನಿಗೆ ಕೃತಜ್ಞತೆ ಯನ್ನು ಸಲ್ಲಿಸುತ್ತಾನೆ. ಅದರ ಪ್ರತೀಕವಾಗಿ ಮಜ್ಜನಕ್ಕೆರೆದು, ಭಸ್ಮಧರಿಸಿ, ಪತ್ರೆ-ಪುಷ್ಪಗಳನ್ನು ಸಮರ್ಪಿಸುತ್ತಾನೆ.

ಎರಡನೆಯದೆ ಲಿಂಗಸ್ತವನ. ಇಲ್ಲಿ ಭಕ್ತನು ದೇವರ ಸ್ವರೂಪ, ಆತ್ಮ ಸ್ವರೂಪ ದೇವ-ಜೀವರ ಸಂಬಂಧ, ತನ್ನ ಗುರಿ ಮುಂತಾದುವುಗಳ ಗಾಢ ಚಿಂತನೆಯನ್ನು ಮಾಡು ತ್ತಾನೆ. ತಾನಾರು, ತನ್ನ ಮೂಲವೇನು ? ಪರಮಾತ್ಮನನ್ನು ಆರಾಧಿಸುತ್ತ ಅವನ ಅನುಗ್ರಹ ಹೊಂದಿ ಹೇಗೆ ಕರ್ತನೊಡನೆ ಸಾಮರಸ್ಯ ಹೊಂದಬೇಕು ಎಂಬುದನ್ನು ಮನನಿಸುತ್ತಾನೆ. ಇದು ಜ್ಞಾನಯೋಗದ ಸಾರ.

ಮೂರನೆಯದೆ ಲಿಂಗಾನುಸಂಧಾನ. ಇಲ್ಲಿ ಸಾಧಕನು ತ್ರಾಟಕ ಯೋಗ (ದೃಷ್ಟಿಯೋಗ)ದ ಮುಖಾಂತರ ಏಕಾಗ್ರತೆಗೆ ಯತ್ನಿಸುವನು. ಬ್ರಹ್ಮಕುಮಾರಿಗಳಲ್ಲಿ ದೃಷ್ಟಿಯೋಗವಿದೆ. ಆದರೆ ಅದು ದೋಷಪೂರ್ಣ. ಒಂದು ಹಂತದಲ್ಲಿ ಓರ್ವರು ವೇದಿಕೆಯ ಮೇಲೆ ಕುಳಿತು ಎದುರಿಗೆ ಕುಳಿತ ಸಾಧಕರನ್ನು ಸತತವಾಗಿ ದಿಟ್ಟಿಸಿ ನೋಡು ವರು. ಶಾಸ್ತ್ರೀಯವಾದ ಯಾವ ಯೋಗಗಳೂ ಈ ವಿಧಾನವನ್ನು ಅನುಮೋದಿಸು-ವುದಿಲ್ಲ. ದೃಷ್ಟಿಯ ಮೂಲಕ ಅನುಗ್ರಹ ಕೊಡುವ ಸಾಮರ್ಥ್ಯ ಬರಬೇಕಾದರೆ ಆ ವ್ಯಕ್ತಿಯು ಜ್ಞಾನಿಯೂ, ನಿರ್ವಿಕಾರಿಯೂ ಆಗಿರಬೇಕಾಗುತ್ತದೆ. ಸಣ್ಣ ಸಣ್ಣ ವಯ ಸ್ಸಿನ ಅಪಕ್ವ ಮನಸ್ಸಿನವರೆಲ್ಲ ಪ್ರಯೋಗ ಮಾಡ ಹೊರಟರೆ ಅಪಾಯವೇ ಹೆಚ್ಚು ಎಂದು ನಿಜಯೋಗಿಗಳು ಯಾರೂ ಈ ವಿಧಾನವನ್ನು ಇಷ್ಟಪಡುವುದಿಲ್ಲ. ಬ್ರಹ್ಮ ಕುಮಾರಿಗಳ ರಾಜಯೋಗದಲ್ಲಿ ನೋಡುವಂತೆ ಕೆಂಪು ಬಣ್ಣದ ಬೆಳಕನ್ನು ನೇರ ದೃಷ್ಟಿ ಯಿಂದ ನೋಡುವುದು ಸಹ ಅವೈಜ್ಞಾನಿಕ. ಸಪ್ತವರ್ಣಗಳಲ್ಲಿ ಕಣ್ಣಿಗೆ ಹಿತವಾದುದು ಕಪ್ಪು – ಹಸಿರು ಮುಂತಾದುವು. ಹೆಚ್ಚು ಅಪಾಯಕಾರಿಯಾದುದು ಕೆಂಪು ವರ್ಣ. ಕೆಂಪು ದೀಪವನ್ನು ನೋಡುವುದು ಸಹ ಅವೈಜ್ಞಾನಿಕ - ಅತಾತ್ತ್ವಿಕ.

ಈ ದೃಷ್ಟಿಯಿಂದ ನೋಡಿದಾಗ ಬಸವ ಧರ್ಮ ಎಷ್ಟು ಶ್ರೇಷ್ಠ ಎಂದು ಮನ-ವರಿಕೆಯಾಗದೆ ಇರದು. ನೇರವಾದ ಬೆಳಕು ನೋಡದೆ ಕಪ್ಪು ಕಂಥೆಯ ಮೇಲೆ ಬಿಳಿಯ ಕಿರಣವನ್ನು ಪ್ರತಿಫಲಿಸಿ, ಪ್ರತಿಫಲನಗೊಂಡ (reflected light) ನೋಡುವ ವಿಧಾನ ಇಲ್ಲಿದೆ. ಕಪ್ಪು ಬಣ್ಣ ಕಣ್ಣಿಗೆ ಹಿತಕಾರಿಯಾದ ಬಣ್ಣ. ಕಣ್ಣಾಲಿಗಳೂ ಕಪ್ಪು.

ಶಕ್ತಿಪಾತದ ಒಂದು ಅಂಗವಾಗಿ ಗುರುವು ದೀಕ್ಷೆ ಕೊಡುವಾಗ ಮಂತ್ರೋಪ-ದೇಶದ ನಂತರ ಒಂದು ಕ್ಷಣಕಾಲ ವಾತ್ಸಲ್ಯಪೂರ್ಣ ನೋಟದಿಂದ ಶಿಷ್ಯನನ್ನು ನೋಡುವ

ಪದ್ಧತಿ ಇಲ್ಲಿದೆಯಾದರೂ- ದೀರ್ಘಕಾಲ ಎದುರು ಕುಳಿತು ನೋಡುವ ವಿಲಕ್ಷಣ ಪದ್ಧತಿ ಇಲ್ಲಿದೆಯಾದರೂ ಅತ್ಯಂತ ತಾತ್ತ್ವಿಕವೂ, ಅಸಹಜ, ಯೋಗಶಾಸ್ತ್ರ ಅನುಮೋದಿಸದ ಪದ್ಧತಿ ಇಲ್ಲಿಲ್ಲ. ಅತ್ಯಂತ ತಾತ್ತ್ವಿಕವೂ, ವೈಜ್ಞಾನಿಕವೂ, ಪ್ರಯೋಗ ಶೀಲವೂ ಆದ ಯೋಗ ಸಾಧನೆ ಇಷ್ಟಲಿಂಗ ಯೋಗದಲ್ಲಿ ಇದ್ದರೂ ಇದರ ಮಹತ್ವವನ್ನರಿಯದ ಅನುಯಾಯಿಗಳು ಕಂಡ ಕಂಡ ಕಡೆಗೆ ಹರಿಯು ವರು. ಇದಕ್ಕೆ ಕಾರಣ ಸೂಕ್ತವಾಗಿ ತಿಳಿಸಿಕೊಡುವವರು ಇಲ್ಲದ್ದು ಮತ್ತು ಸುಲಭ ವಾಗಿ ಸಿಕ್ಕುವ ಕಾರಣ ಇದರ ಬೆಲೆ ತಿಳಿಯದುದು.

ಬಸವ ಮಹಾಮನೆ ಆವರಣದಲ್ಲಿ ಸಿಕ್ಕಿರುವ ಕೊಳವೆ ಭಾವಿಯ ನೀರು ಬಹಳ ಸಿಹಿ ಇದೆ. ಸಕ್ಕರೆ ಬೆರಸಿದಂತೆ ಸವಿ ಇದೆ. ಈ ಸಲ ಬೇಸಿಗೆಯಲ್ಲಿ ಫೆಬ್ರವರಿಯಿಂದ ಮೇ ಪೂರ್ತಿ ಊರಿನ ಜನ ಸಹ ಇಲ್ಲಿಂದಲೇ ನೀರು ಒಯ್ಯುತ್ತಿದ್ದರು. ನದಿ ಬತ್ತಿದ್ದು ಒಂದು ಕಾರಣವಾದರೆ, ಉಳಿದ ಅಷ್ಟಿಷ್ಟು ನೀರು ವಿಷಯುಕ್ತವಾಗಿ ನದಿ ನೀರನ್ನು ಉಪಯೋಗಿಸಲೇ ಕೂಡದೆಂದು ಆರೋಗ್ಯ ಇಲಾಖೆಯವರು ಕಟ್ಟಪ್ಪಣೆ ವಿಧಿಸಿದ್ದರು. ಕಾಲರಾ ಮುಂಜಾಗ್ರತೆಗಾಗಿ ಬಂದ ಆರೋಗ್ಯ ಇಲಾಖೆಯವರು ಸಹ ಕ್ಯಾನ್‌ಗಳಲ್ಲಿ ನಮ್ಮ ನೀರನ್ನು ತುಂಬಿಸಿಕೊಂಡು ಜೋಪಾನವಾಗಿ ಖರ್ಚು ಮಾಡುತ್ತಿದ್ದರು. ಊರಲ್ಲಿ ಕೊಳವೆ ಭಾವಿ ಇದ್ದರೂ ನೀರು ಇಷ್ಟು ರುಚಿಯಿಲ್ಲವಂತೆ. ಹೀಗಾಗಿ ಕೆಲವು ಜನರು ನದಿಗೆ ನೀರು ಬಂದಿದ್ದರೂ, ಕುಡಿಯಲು ಮಾತ್ರ ದೂರವಾದರೂ ಮಹಾಮನೆ ನೀರನ್ನೇ ಒಯ್ದು ಜೋಪಾನವಾಗಿ ಅಷ್ಟಷ್ಟೆ ಬಳಸುತ್ತಾರಂತೆ.

ಮಹಾಮನೆಯಲ್ಲಿ ಬಿಲ್ಡಿಂಗ್ ಕಟ್ಟಲು ಇದೇ ನೀರು, ಕುಡಿಯಲು ಸ್ನಾನಕ್ಕೆ ವಿಪುಲವಾಗಿ ಸಿಗುತ್ತದೆ. ಹೀಗಾಗಿ ಇದರ ಬೆಲೆ ಇಲ್ಲಿರುವವರಿಗೆ ತಿಳಿಯದು ; ಸುಲಭ ವಾಗಿ ಬಕೆಟ್ಟುಗಟ್ಟಳೆ ನೀರನ್ನೇ ಚೆಲ್ಲಬಹುದು. ಇಡೀ ದಿನ ಕುಡಿಯಲು ಬೇಕೆಂದು ದೂರದಿಂದ ಒಯ್ದವರು ಎಚ್ಚರಿಕೆಯಿಂದ ಬಳಸುತ್ತಾರೆ. ಹಾಗೆಯೇ ಸರ್ವಾಂಗ ಪರಿಪೂರ್ಣವಾದ ಒಂದು ಧರ್ಮ ಅನಾಯಾಸವಾಗಿ, ಹುಟ್ಟಿದ ಕಾರಣದಿಂದಲೇ ಲಭ್ಯವಾಗಿರುವ ಕಾರಣ ಬಹುಪಾಲು ಲಿಂಗವಂತರು ಇದರ ಬೆಲೆಯನ್ನರಿಯದೆ ಉದಾ ಸೀನದಿಂದ ವರ್ತಿಸುತ್ತಾರೆ. ಇದರ ಮಹತ್ವ ಅರಿತು ಬಂದು ಸ್ವೀಕರಿಸಿದವರು ಬೆಲೆ ಯನ್ನರಿತು, ಅಪೂರ್ವ ನಿಧಿ ಎಂಬಂತೆ ಗೌರವಿಸುತ್ತಾರೆ ; ಧರ್ಮಗುರು ನಿಷ್ಠೆ–ಲಿಂಗ ನಿಷ್ಠೆಗಳನ್ನು ಅಳವಡಿಸಿಕೊಳ್ಳಲು ಉತ್ಸುಕರಾಗಿರುತ್ತಾರೆ.

ಕೆಲವು ಪಂಥಗಳು ಕೇವಲ ಅಧ್ಯಾತ್ಮಿಕ ದೃಷ್ಟಿಕೋನ ಹೊಂದಿರುತ್ತವೆ. ಅವು ಗಳಲ್ಲಿ ಸೈದ್ಧಾಂತಿಕ ದೃಢತೆ ಇರದು ; ಸಮಾಜ ಶಾಸ್ತ್ರ ಸಾಮಾಜಿಕ–ರಾಷ್ಟ್ರೀಯ ಪ್ರಜ್ಞೆಯಂತೂ ಮೊದಲೇ ಇರವು. ಇನ್ನು ಕೆಲವು ಭಾಕ್ತಿಕ ಪಂಥಗಳು; ವಿಚಾರಶಕ್ತಿ ಅಲ್ಲಿ ಸತ್ತೇ ಹೋಗಿರುತ್ತದೆ. ಮತ್ತೆ ಕೆಲವು ಯೋಗ ಮಾರ್ಗಗಳು. ಅವರಿಗೆ ಯೋಗ ಸಾಧನೆ ಹೊರತು ಇನ್ನಾವ ಅಂಶಗಳಲ್ಲಿಯೂ ಆಸಕ್ತಿ ಇರದು. ವ್ಯಕ್ತಿಯನ್ನು– ಸಮಾಜವನ್ನು ಸುವ್ಯವಸ್ಥಿತವಾಗಿ ಸುಂದರವಾಗಿ ಎತ್ತಿ ಹಿಡಿಯುವ, ಸರ್ವಾಂಗೀಣ- ವಾಗಿ ಅಭಿವೃದ್ಧಿಗೊಳಿಸುವ ಪರಿಪೂರ್ಣ ಧರ್ಮ ಬಸವ ಧರ್ಮ. ಸಿದ್ಧಾಂತ ಸದೃಢ; ಸಾಧನೆ ಉತ್ಕೃಷ್ಟ ; ದರ್ಶನ ಶಾಸ್ತ್ರವಂತೂ ಅನುಭಾವದಿಂದ ತುಂಬಿ ತುಳುಕುತ್ತದೆ.

ಇವು ಮೂರು ಬುದ್ಧಿ–ಹೃದಯಗಳಿಗೆ ಸಂಬಂಧಪಟ್ಟವಾದರೆ, ಸಮಾಜ ಶಾಸ್ತ್ರ– ಅರ್ಥಶಾಸ್ತ್ರಗಳಂತೂ ಸದೃಢ ಸಮಾಜ–ರಾಷ್ಟ್ರವನ್ನು ಕಟ್ಟುತ್ತವೆ. ಜಾತಿವರ್ಣವರ್ಗ ರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯದ ಕಲ್ಪನೆ ನೀಡುತ್ತವೆ. ಹೀಗಿರುವಾಗ ಈ ಧರ್ಮದ ಮಹತ್ವವನ್ನು ಅರಿತು, ಅಳವಡಿಸಿಕೊಂಡು ಇನ್ನಿತರರಿಗೂ ಹೇಳಬೇಕಾದುದು ಪ್ರತಿಯೊಬ್ಬ ಅನುಯಾಯಿಯ ಮತ್ತು ಗುಣಗ್ರಾಹಿ ಮುಮುಕ್ಷುವಿನ ಕರ್ತವ್ಯ.

ಒಂದು ವೇಳೆ ಯಾವುದಾದರೂ ಒಂದು ವಿಶೇಷವಾದುದು ಅನ್ಯ ಮತಪಂಥ ಧರ್ಮಗಳಲ್ಲಿದ್ದರೆ ಆ ಅಂಶವನು ನಾವೂ ಅಳವಡಿಸಿ ಈ ಧರ್ಮವನ್ನು ಜನಪ್ರಿಯ- ಗೊಳಿಸಬೇಕು ; ಇದಕ್ಕಾಗಿಯೇ ಪ್ರಾರಂಭದಲ್ಲಿ ಕೆಲವು ಹೋಲಿಕೆಗಳನ್ನು ನಾನು ಕೊಟ್ಟುದು. ಓರ್ವ ಮಹಿಳೆ ಉಟ್ಟ ಸೀರೆ ಚೆಂದವಿದ್ದರೆ ಅವಳ ಬೆನ್ನು ಹತ್ತದೆ, ಅಂಥ ಸೀರೆಯನ್ನು ಖರೀದಿಸಿ ತಂದು ತನ್ನ ಹೆಂಡತಿಗೆ ಉಡಿಸುವುದು ಸಭ್ಯ ಗೃಹಸ್ಥನ ಲಕ್ಷಣ.

ಬಸವಾದಿ ಪ್ರಮಥರ ಕಾಲದಲ್ಲಿ ಅನುಭವ ಮಂಟಪದಲ್ಲಿ ಸಮಾವೇಶವಾದಾಗ ಅವರು ಏನೇನು ಕ್ರಮಗಳನ್ನು ಅನುಸರಿಸುತ್ತಿದ್ದರು ನಮಗೆ ಖಚಿತವಾಗಿಲ್ಲ. ಏಕೆಂದರೆ ಅವರು ಬರೆದ ಎಲ್ಲ ಸಾಹಿತ್ಯ ಲಭ್ಯವಾಗಿಲ್ಲ. ನಾವೀಗ ಸಾಹಿತ್ಯ ಓದಿ ಓದಿ ಕಳಚಿರುವ ಕೊಂಡಿ (missing links) ಗಳನ್ನು ಜೋಡಿಸಿ ಒಂದು ನಿಲುವಿಗೆ ಬರಬೇಕಾಗಿದೆ. ಆದ್ದರಿಂದ ಇಂದು ಮುಸ್ಲಿಂ–ಕ್ರೈಸ್ತ ಸಮಾಜಗಳನ್ನು ಅವರು ಕಟ್ಟಿರುವುದು ಮತ್ತು ಜೀವಂತವಾಗಿ ಇಟ್ಟಿರುವುದು ಸಾಮೂಹಿಕ ಪ್ರಾರ್ಥನೆಯಿಂದ ಎಂದು ಅರಿತು ಅದನ್ನು ಎಲ್ಲ ಕಡೆಯಲ್ಲೂ ಅಳವಡಿಸುತ್ತಿದ್ದೇವೆ. ಈ ಸಾಮೂಹಿಕ ಪ್ರಾರ್ಥನೆಗಳಿಂದ ಅದ್ಭುತ ಪರಿವರ್ತನೆ, ಜಾಗೃತಿ, ಸಂಘಟನೆ ಆಗುತ್ತಿದೆ. (ಇದರಿಂದ ಮತ್ಸರಗೊಂಡ ಹಲವು ಮಠಾಧೀಶರು ಮತ್ತು ಅವರ ಹಿಂಬಾಲಕರು ಸಾಮೂಹಿಕ ಪ್ರಾರ್ಥನೆ ನಮ್ಮ- ಲ್ಲಿಲ್ಲ ಎಂದು ಮಾಡುವವರನ್ನು ಬಿಡಿಸುವುದು, ರಾಷ್ಟ್ರೀಯ ಬಸವ ದಳಗಳನ್ನು ಒಡೆಯುವುದನ್ನು ಮಾಡುತ್ತಲಿದ್ದಾರೆ.)

ಹಾಗೆಯೇ ಯಾವುದು ಬಸವ ಧರ್ಮಕ್ಕೆ ವಿರುದ್ಧವಾಗಿಲ್ಲವೋ ಅಂಥ ಯೋಗ ಪದ್ಧತಿ–ಧ್ಯಾನ ಮುಂತಾದುವನ್ನು ಅಳವಡಿಸಿ ಸ್ವಧರ್ಮಾನುಯಾಯಿಗಳನ್ನು ಇಲ್ಲಿಯೇ ಉಳಿಸಿಕೊಳ್ಳುವುದರ ಜೊತೆಗೆ ಮುಮುಕ್ಷುಗಳಾದ ಇತರರನ್ನು ಆಕರ್ಷಿಸಬೇಕು. ಶಿವಯೋಗದ ತರಗತಿಗಳನ್ನು ಅಳವಡಿಸುವಾಗ ಆರಂಭಿಕ ಹಂತದಲ್ಲಿ ಆಸನ ಯೋಗ (ಯೋಗಾಸನಾಭ್ಯಾಸ) ನಂತರ ರಾಜಯೋಗ (ಪಾಂತಜಲಿ ಬೋಧಿಸುವ ಧ್ಯಾನ) ಮುಂತಾದವುಗಳ ಮೂಲಕ ಇಷ್ಟಲಿಂಗ ತ್ರಾಟಕಯೋಗವನ್ನು ಲಿಂಗಧ್ಯಾನವನ್ನು ಅಳವಡಿಸಬೇಕು. ಹೀಗೆ ಮಾಡುವುದು ಬಿಟ್ಟು ಯಾವುದಾದರೊಂದು ಹೊಸ ಹೆಸರಿನಿಂದ ಹುಟ್ಟುತ್ತಲೇ ಆ ಪಂಥಕ್ಕೆ ಬುದು ಬುದು ಎಂದು ಕುರಿಗಳಂತೆ ನುಗ್ಗುವ ಜನರನ್ನು ಕಂಡು ನನಗೆ ಆಶ್ಚರ್ಯವೆನಿಸುತ್ತದೆ. 'ಅರಸನ ಕಂಡು ಪುರುಷನ ಮರೆದ' ಇಂಥ ಜನ ಸಾಯುವಾಗ - ಸತ್ತಾಗ ತನ್ನ ಧರ್ಮವನ್ನು ತನ್ನ ಸಮಾಜವನ್ನು ಆಶ್ರಯಿಸುವು ದನ್ನು ನೋಡಬಹುದು. ಸಾಯುವಾಗ - ಸತ್ತಾಗ ಸಂಸ್ಕಾರಕ್ಕಾಗಿ ಮಾತ್ರ ಧರ್ಮ ವನ್ನು ಪ್ರೀತಿಸದೆ ಜೀವಂತವಾಗಿದ್ದಲೇ ಇದನ್ನು ಅರಿತು, ಅನುಷ್ಠಾನಿಸಿ ಜೀವನದ ಸಾರ್ಥಕ್ಯತೆ ಸಾಧಿಸಬೇಕು. ★

ಪಂಚಪೀಠಾಧೀಶರ ವಿಪರ್ಯಾಸ

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಸಂಯುಕ್ತ ಕರ್ನಾಟಕ ದಿನ ಪತ್ರಿಕೆ ತಿರುವಿ ಹಾಕುತ್ತಿದ್ದೆ. ಪಂಚಪೀಠಾಧೀಶರಲ್ಲಿ ಒಬ್ಬರ ಅಡ್ಡಪಲ್ಲಕ್ಕಿ ಜಾಹಿರಾತು ಬಂದಿತ್ತು. ಅವರದು ಇನ್ನಾವ ಯೋಚನೆ–ಯೋಜನೆ ಇಲ್ಲವೇ ಇಲ್ಲವಲ್ಲ, ಅಡ್ಡಪಲ್ಲಕ್ಕಿಯಲ್ಲಿ ಹೊರಿಸಿಕೊಳ್ಳುವ ಒಂದಂಶದ ಕಾರ್ಯಕ್ರಮವೇ ಅವರ ಸರ್ವಸ್ವ. ಜಾಹಿರಾತಿನಲ್ಲಿ ಸ್ಥಾವರಲಿಂಗದಲ್ಲಿ ಉದ್ಭವವಾಗಿ ನಿಂತ ಒಬ್ಬ ಆಚಾರ್ಯರ ಚಿತ್ರವಿತ್ತು. ಎಷ್ಟೋ ಸಲ ನೋಡಿದ್ದೇವೆ ನೀವುಗಳೂ ನೋಡಿದ್ದೀರಿ.

ಇದು ಇದ್ದಕ್ಕಿದ್ದಂತೆಯೇ ಒಂದು ಆಲೋಚನೆ ಬಂದಿತು. "ಇವರು ಎಂಥಾ ಜನ! ಇವರಿಗೆ, ಇವರು ದೇವರು ಎಂದು ನಂಬಿದುದರಲ್ಲಿ ಶ್ರದ್ಧೆಯೇ ಇಲ್ಲ. ತಾವು ದೇವರೆಂದು ನಂಬಿದುದನ್ನು ಕಾಲಲ್ಲಿ ತುಳಿಯುವವರಲ್ಲ. ಇದು ಪಾಪವಲ್ಲವೇ?"

ನಾವು ನಿರಾಕಾರನಾದ ಸೃಷ್ಟಿಕರ್ತನನ್ನು ನಂಬುತ್ತೇವೆ. ಇಷ್ಟಲಿಂಗಾಕಾರದಲ್ಲಿ ಕರ್ತನನ್ನು ಧರಿಸಿ ಪೂಜಿಸುತ್ತೇವೆ. ಕರ್ತನಲ್ಲದೆ ಅನ್ಯ ದೇವರುಗಳನ್ನು ಪೂಜಿಸ–ಬಾರದೆಂದು ನಮ್ಮ ಧರ್ಮಗುರು ಕಟ್ಟಪ್ಪಣೆ ವಿಧಿಸಿರುವುದರಿಂದ ನಾವು ಸ್ಥಾವರ ಲಿಂಗವನ್ನು ಪೂಜಿಸುವುದಿಲ್ಲ. ಆದರೆ ಅದನ್ನು ನಾವು ಅಗೌರವಿಸುವುದಿಲ್ಲ, ಸ್ಥಾವರ ಲಿಂಗವು ಐತಿಹಾಸಿಕ ಯೋಗಿರಾಜನಾದ ಶಿವನ ಪ್ರತೀಕ ಎಂದು ನಾವು ನಂಬುತ್ತೇವೆ. ಸಾಂಪ್ರದಾಯಿಕ ಶೈವರು, ಪಂಚಾಚಾರ್ಯರುಗಳು ಅದು ಪರಶಿವನ ಪ್ರತೀಕ ಎಂದು ಭಾವಿಸುತ್ತಾರೆ. ಆ ಪರಶಿವನ ಐದು ಮುಖಗಳಿಂದ 5 ಜನ ಆಚಾರ್ಯರು ಹುಟ್ಟಿಬಂದರಂತೆ. ಐದು ಸ್ಥಾವರ ಲಿಂಗಗಳನ್ನು ಭೇದಿಸಿಕೊಂಡು ಹೊರ ಬಂದರಂತೆ. ತಮ್ಮ ಮಹತ್ಕಾರ್ಯಗಳನ್ನು (?) ಪೂರೈಸಿ ಕಡೆಯಲ್ಲಿ ಲಿಂಗಗಳಲ್ಲೇ ಅಡಗಿದರಂತೆ. ಹೀಗೆಂದು ಕಥೆ ಹೇಳುವರು.

ಮೊದಲೇನೋ ಸ್ಥಾವರಲಿಂಗಗಳ ಗರ್ಭದಿಂದ ಹೊರಬಂದರು ಎಂದು ಕೊಂಚ ಕಾಲ ಹುಚ್ಚರಾಗಿ ನಂಬೋಣ. ಮಗುವು ತಾಯಿಯ ಗರ್ಭದಿಂದ ಬರುತ್ತದೆ. ತೊಡೆಯ ಮೇಲೆ ಆಡುತ್ತದೆ, ಬೆಳೆಯುತ್ತದೆ. ಆದರೆ ದೊಡ್ಡವನಾದ ಮೇಲೆ ಎಂದೂ ಆ ತಾಯಿಯ ಗರ್ಭ ಅಥವಾ ಹೊಟ್ಟೆಯನ್ನು ತುಳಿದು ನಿಲ್ಲುವುದಿಲ್ಲ. ಪಂಚಾಚಾರ್ಯರು ಪರಶಿವನ ಪ್ರತೀಕ ಎಂದು ನಂಬುವ, ತಮ್ಮ ಮಾತೃಸ್ಥಾನ-ಸ್ಥಾವರಲಿಂಗದ ಮೇಲೆ ಪುನಃ (ಚಿತ್ರದಲ್ಲಿ) ಕಾಲಿಟ್ಟು ನಿಂತು ತುಳಿಯುವುದೆಂದರೆ ಪಾಪದ ಕೆಲಸವಲ್ಲವೆ? ಸ್ಥಾವರ ಲಿಂಗವು 'ದೇವರು' ಎಂದಾದರೂ ಬೆಲೆ ಕೊಡಲಿ ಅಥವಾ ತಮ್ಮ ಮಾತೃಸ್ಥಾನ ಎಂದಾದರೂ ಬೆಲೆ ಕೊಡಲಿ, ಯಾವುದೇ ಅರ್ಥದಲ್ಲೂ ಅದನ್ನು ತುಳಿಯುವುದು ತಪ್ಪಲ್ಲವೆ? ಅದರಲ್ಲಿ ಅಡಗಲು ಹೋಗಬೇಕಾದರೆ ಹತ್ತಿ, ತುಳಿದು ನಿಲ್ಲಲೇಬೇಕು ತಾನೆ? ಹೀಗೆ ಅವರು ತಾವು ಪೂಜ್ಯವೆಂದು ತಿಳಿಯುವ ವಸ್ತುವನ್ನೇ ನಿರ್ಭಯವಾಗಿ ಮೆಟ್ಟಿ ನಿಂತಿರುವುದನ್ನು ಚಿತ್ರಗಳಲ್ಲಿ ಕಾಣುತ್ತೇವೆ. ಘಸ್ನಿ ಮೊಹಮ್ಮದ್ ಸೋಮನಾಥ ದೇವಾಲಯದ ಲಿಂಗವನ್ನು ಒಡೆದು ಅಗೌರವಿಸಿದ್ದಕ್ಕೂ ಇದಕ್ಕೂ ವ್ಯತ್ಯಾಸವೇನಿದೆ? ಆಚಾರ್ಯ ಪುರುಷರು ಬಹಳ ದೊಡ್ಡವರು ಅವರಿಗೆ ಈ ರಿಯಾಯಿತಿ ಎನ್ನುವುದಾದರೆ ಯಾವ ಮುಖಗಳಿಂದ ಹುಟ್ಟಿದರೋ ಆ ಪರಶಿವನಿಗಿಂತಲೂ ದೊಡ್ಡವರೆ? ಪ್ರಾಜ್ಞರು ಸಂದೇಹ ಪರಿಹರಿಸಿರಿ. ★

ನಿತ್ಯಸುಖದ ದಾರಿ

—ಮಾತಾಜಿ

ಅಡಿ ಅಳುಪದಿರಾ, ಲೇಸ ಮಾಡಿ ಮರುಗದಿರಾ, ಎಲೆ ಮನವೆ.
ಕೂಡಿ ತಪ್ಪದಿರಾ, ಬೇಡಿದವರಿಗೆ ಇಲ್ಲೆನ್ನದಿರು ಕಂಡಾ
ನಾಡ ಮಾತು ಬೇಡ, ಸೆರಗೊಡ್ಡಿ ಬೇಡು
ಕೂಡಲ ಸಂಗನ ಶರಣರ. (ಬ. ಷ. ವ. ೨೭೮.)

ಸರಳಾರ್ಥ : ಮಾತನಾಡಿ ಭಯಪಡಬೇಡ, ವ್ಯಥೆ ಪಡಬೇಡ. ಒಳ್ಳೆಯದನ್ನು ಮಾಡಿ ಮರುಗಬೇಡ, ಒಮ್ಮೆ ಸೇರಿದ ಬಳಿಕ ಮಾತಿನಲ್ಲಿ, ನಡೆ-ನುಡಿಯಲ್ಲಿ ತಪ್ಪಬೇಡ. ಬೇಡಿದವರಿಗೆ ಇಲ್ಲೆನ್ನದೆ (ಕೈಲಾದಷ್ಟು) ಕೊಡು, ಲೋಕದ ಜನರ ಮಾತು ಬೇಡ, ನಿಜವಾದ ಶರಣರಲ್ಲಿ ಸಂಕೋಚಪಡದೆ ಹೃದಯತುಂಬಿ ಬೇಡು.

ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ 'ಅಳುಪು' ಎನ್ನುವ ಪದವಿಲ್ಲ. ದೊಡ್ಡ ನಿಘಂಟಿನಲ್ಲಿ ಬೇರೆ ಬೇರೆ ಅರ್ಥಗಳಲ್ಲಿದೆ. ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ ಅಳಿಪು ಅಂದರೆ ಅತಿಯಾಸೆಪಡು, ಅಳುಕು–ಅಂದರೆ ಮುಳ್ಳು ಶರೀರದೊಳಗೆ ಸೇರಿಕೊಂಡು ಮಾಡುವ ಬಾಧೆ, ಅಳುಪ್ಪು-ಅಂದರೆ ಭಯ, ಮನೋವ್ಯಥೆ ಎಂದಿದೆ.

ವ್ಯಕ್ತಿಯು ಒಮ್ಮೊಮ್ಮೆ ದುಡುಕಿ ಮಾತನಾಡಿ ಬಿಡುತ್ತಾನೆ. ನಂತರ ಅದು ಒಳಗೆ ಕಟೆಯ ತೊಡಗುತ್ತದೆ. ಆಗ ಬಹಳಷ್ಟು ವ್ಯಥೆಪಡುತ್ತಾನೆ, ಈ ವ್ಯಥೆ ಅವನಲ್ಲಿ ಬಹುಕಾಲ ಉಳಿದು ಆಗಾಗ ಅಪಾರ ವೇದನೆಯ ಮರುಕಳಿಸುವಂತೆ ಮಾಡುತ್ತದೆ. ಇದು ಒಳ್ಳೆಯದಲ್ಲ. ಕೈಮೀರಿ ನಡೆದು ಹೋಗಿರುವುದರ ಬಗ್ಗೆ, ಒಮ್ಮೆ ಪಶ್ಚಾತ್ತಾಪ ಪಟ್ಟು ಮರೆತು ಬಿಡಬೇಕು. ಇಲ್ಲವೇ ಸಂಬಂಧಿಸಿದ ವ್ಯಕ್ತಿಯ ಮುಂದೆ ಬಹಿರಂಗವಾಗಿಯೇ ಆದ ಪ್ರಸಂಗದ ಬಗ್ಗೆ ಪರಿತಾಪಪಟ್ಟು ಕ್ಷಮೆ ಕೇಳಿಬಿಡಬೇಕು. ಅದು ಬಿಟ್ಟು ಅದನ್ನು ಚುಚ್ಚಿದ ಮುಳ್ಳಿನಂತೆ ಒಳಗೆ ಇಟ್ಟುಕೊಂಡರೆ ಅದು ಆಗಾಗ ಬಹಳ ವ್ಯಥೆಯನ್ನು ಕೊಡುತ್ತದೆ.

ಅಳುಪು-ಅನ್ನುವ ಪದಕ್ಕೆ ಭಯಪಡು ಎಂಬ ಅರ್ಥದಲ್ಲಿಯೂ ಈ ವಾಕ್ಯವನ್ನು ಅರ್ಥೈಸಬಹುದು. ಕೆಲವೊಮ್ಮೆ ಅಂತರ್‌ಪ್ರೇರಣೆ ಉಂಟಾಗಿ ಯಾವುದೋ ಒಂದು ಮಾತನ್ನು ಶರಣನು ಆಡಿಬಿಡುವುದುಂಟು. ಆ ಹೇಳಿಕೆಯ ಬಗ್ಗೆ ಲೋಕದ ಜನರು ತೀವ್ರವಾಗಿ ಪ್ರತಿಕ್ರಿಯೆ ನೀಡುವರು. ಆಗ ಆಡಿದವನಲ್ಲಿ ಭಯವು ಉಂಟಾಗುವ ಸಾಧ್ಯತೆಯುಂಟು. "ಈ ಭಯ ಬೇಡ" ಎನ್ನುತ್ತಾರೆ ಧರ್ಮಪಿತರು. ಇದಕ್ಕೆ ಇನ್ನೊಂದು

ವಚನದಲ್ಲಿ ವಿವರಣೆ ಸಿಗುತ್ತದೆ. "ಲಿಂಗವಶದಿಂದ ಬಂದ ನಡೆಗಳು, ಲಿಂಗವಶದಿಂದ ಬಂದ ನುಡಿಗಳು; ಲಿಂಗವಂತರು ತಾವು ಅಂಜಲೇಕೆ ? ಲಿಂಗವಿರಿಸಿದಂತಿಪ್ಪುದಲ್ಲದೆ, ಕೂಡಲಸಂಗಮದೇವ ಭಕ್ತರಭಿಮಾನ ತನ್ನದೆಂಬನಾಗಿ." (ಬ.ಷ.ವ. ೬೮೪)

ಅಂತರ್ ಪ್ರೇರಣೆಯಿಂದ ಬಂದ ಮಾತುಗಳು ಪರಮಾತ್ಮನ ಸಂಕಲ್ಪದಂತೆ ಮೂಡಿಬಂದಿರುತ್ತವೆ. ತತ್ಕಾಲದಲ್ಲಿ ಜನರು ಅರ್ಥಮಾಡಿಕೊಳ್ಳಲಾರದೆ ತೀವ್ರವಾಗಿ ಪ್ರತಿಕ್ರಿಯೆ ನೀಡಬಹುದು, ವಿರೋಧಿಸಬಹುದು. ದೇವನಲ್ಲಿ ಅನನ್ಯ ನಂಬುಗೆ ಹೊಂದಿರುವ ಶರಣನು ತಾನಾಡಿದ ಮಾತಿಗಾಗಿ ಭಯಪಡಬಾರದು ; ತನ್ನ ಮೂಲಕ ದೇವನೇ ಆಡಿರುವ ಮಾತುಗಳಿವು ಎಂದು ಭಾವಿಸಬೇಕು. ಏಕೆಂದರೆ ದೇವರು ಶರಣನ ಮೂಲಕ ತಾನೇ ಆಡಿರುವನಾದ ಕಾರಣ, ಭಕ್ತನ ಅಭಿಮಾನವನ್ನು ಕಾಯ್ದುಕೊಳ್ಳುವುದಕ್ಕಾಗಿ ಭಕ್ತನ ಬೆಂಗಾವಲಿಗೆ ನಿಲ್ಲುವನು. ಅವನಾಡಿದ ಮಾತು ಕ್ರಿಯಾರೂಪ ತಳೆಯಲು ಆಸಕ್ತಿ ವಹಿಸುವನು. ಆದ್ದರಿಂದ ಆಡಿದ ಒಳ್ಳೆಯ ಮಾತಿಗೆ ಭಯಪಡಬಾರದು, ವ್ಯಥೆಯನ್ನೂ ಪಡಬಾರದು.

ಲೇಸ ಮಾಡಿ ಮರುಗದಿರಾ : ಈ ಮಾತು ಬಹುದೊಡ್ಡ ಸಂದೇಶ. ಒಳ್ಳೆಯ ಜನರು ಆದರ್ಶವಾದಿಗಳು, ಜನರಿಗೆ ಹಲವಾರು ಉಪಕಾರಗಳನ್ನು ಮಾಡುತ್ತಿರುತ್ತಾರೆ. ಉಪಕೃತರಾದ ಅನೇಕ ಜನರಲ್ಲಿ ಕೃತಜ್ಞತೆ ಇರುವುದಿಲ್ಲ, ಕೆಲವೊಮ್ಮೆ ಉಪಕಾರ ಮಾಡಿದವರಿಗೆ ದ್ರೋಹವನ್ನು ಮಾಡಿ, ನೋವು ಕೊಡುತ್ತಾರೆ. ಆಗ ಮನಸ್ಸು, "ನಾನು ಇವರಿಗೆ ಏಕಾದರೂ ಒಳ್ಳೆಯದನ್ನು ಮಾಡಿದೆನೊ, ಇನ್ನು ಮುಂದೆ ಇಂಥ ಪ್ರಸಂಗ ಬಂದಾಗ ಖಂಡಿತಾ ಒಳ್ಳೆಯದನ್ನು ಮಾಡಹೋಗದೆ ತಟಸ್ಥವಾಗಿ ಇದ್ದು ಬಿಡಬೇಕು"ಎಂದು ಆಲೋಚಿಸುತ್ತದೆ. ಅಂಥ ಮನಸ್ಸಿಗೆ ಧರ್ಮಪಿತರು ಬುದ್ಧಿ ಹೇಳುತ್ತಾರೆ. ನೀನು ಮಾಡಬೇಕಾದ ಒಳ್ಳೆಯದನ್ನು ಮಾಡು, ಉಪಕೃತರು ಅದನ್ನು ಸ್ಮರಿಸದೆ ಹೋದರೆ ಅವರ ಪಾಪಕ್ಕೆ ಅವರು ಹೊಣೆಯಾಗುತ್ತಾರೆ. ನೀನು ಮಾಡಿದ್ದು ಒಳ್ಳೆಯದು ತಾನೆ ? ಅದು ತಾನು ಗಳಿಸಿಕೊಳ್ಳಬೇಕಾದ ಪುಣ್ಯವನ್ನು ಸಂಗ್ರಹಿಸಿಯೇ ತೀರುತ್ತದೆ." ಎಂಥಾ ಹಿತೋಪದೇಶ !

ಒಮ್ಮೆ ಒಬ್ಬ ವ್ಯಕ್ತಿ, ಆತ ಬಸ್ ಡ್ರೈವರು ; ಜೀವನದಲ್ಲಿ ಏನೇನೂ ಪ್ರಯೋಜನವಿಲ್ಲದ ಮೂರು ಕಾಸಿನ ಕೆಲಸವನ್ನೂ ಮಾಡದ ತನ್ನ ಅಣ್ಣನನ್ನು ಕರೆತಂದು ಆಶ್ರಯ ಕೊಡಿ ಎಂದ. ಏಕೋ ಆ ಮುಗ್ಧನನ್ನು ನೋಡಿ ಅಯ್ಯೋ ಎನಿಸಿತು. 'ಹೋಗಲೀ ಬಿಡು, ಎಷ್ಟೋ ನಿಷ್ಪ್ರಯೋಜಕನಿರಲಿ ನೂರಾರು ಜನ ಪ್ರಸಾದ ಪಡೆಯುವಲ್ಲಿ ಅವನು ಉಂಡರೆ ಕಮ್ಮಿ ಏನಾಗದು' ಎಂದು ಒಪ್ಪಿಗೆ ಕೊಟ್ಟೆ. ನಿರುಪದ್ರವಿ ಜೀವಿ ತನ್ನ ಪಾಡಿಗೆ ತಾನು ಬಂದು ಉಣ್ಣುತ್ತಾನೆ, ಒಂದು ಕಡೆ ಇರುತ್ತಾನೆ ಎಂದು ಒಪ್ಪಿಗೆ ಕೊಟ್ಟೆ.

ಒಂದು ದಿನ ಅತ್ಯಂತ ಅವಸರದ ಮಹತ್ವದ ದಾಖಲೆಯೊಂದನ್ನು ಧಾರವಾಡದಿಂದ ಆ ಡ್ರೈವರನ ಕೈಲಿ ಕೊಟ್ಟರೆ ಆತ ಅದನ್ನು ಬಸ್ ನಿಲ್ಲಿಸಿ ಕೊಡದೆ ತಗೊಂಡು ಹೋಗಿ ಎಲ್ಲೋ ಹಾಕಿದ್ದ. ಮರುದಿನ ಇನ್ನೊಂದು ಪತ್ರ ಬಂದಾಗ ಹಿಂದಿನ ದಿವಸ ಪತ್ರ-ದಾಖಲೆ ಕಳಿಸಿದ್ದು ತಿಳಿಯಿತು. ಮನಸ್ಸಿಗೆ ತೀರ ಕಳವಳವಾಯಿತು, "ಈತ ಅದೆಷ್ಟು ಕ್ಷುಲ್ಲಕ ವ್ಯಕ್ತಿ. ಯಾವ ರೀತಿಯಲ್ಲೂ ಪ್ರಯೋಜನವಿಲ್ಲದ ಇವನ ಅಣ್ಣನಿಗೆ ಆಶ್ರಯ-ಪ್ರಸಾದ ಕೊಟ್ಟು ಇಟ್ಟುಕೊಂಡರೂ ಸ್ವಲ್ಪವೂ ಸೌಜನ್ಯವಿಲ್ಲವಲ್ಲ. ಬೇರೆ ಅನೇಕ ಡ್ರೈವರುಗಳು ನಮ್ಮಿಂದ ಯಾವ ರೀತಿಯಿಂದ ಉಪಕಾರ ಹೊಂದಿರದಿದ್ದರೂ ಪ್ರಸಂಗ ಬಂದಾಗ ಸೌಜನ್ಯ ಎಂದು ಸಹಾಯ ಮಾಡುತ್ತಾರೆ. ಈತ ಉಪಕಾರ ಮಾಡುವುದಿರಲಿ ಕನಿಷ್ಟ ಸೌಜನ್ಯವೂ ಈತನಲ್ಲಿ ಇಲ್ಲವಲ್ಲ. ಈತನ ಮಾತಿಗೆ ಬೆಲೆ ಕೊಟ್ಟು ತಾನೇ ಆ ಉಪಯೋಗವಿಲ್ಲದ ಜೀವಿಗೆ ಆಶ್ರಯ ಕೊಟ್ಟಿರುವುದು. ಆದ್ದರಿಂದ ನೀನು ತಂದು ಬಿಟ್ಟವನನ್ನು ಕರೆದುಕೊಂಡು ಹೋಗು" ಎಂದು ಹೇಳಿಬಿಡಬೇಕು ಎಂದು ಮನಸ್ಸು ತುಂಬಾ ಕೋಪಗೊಂಡಿತು.

ಆಗ ತಟ್ಟನೆ ಧರ್ಮಪಿತರ ಮಾತು ನೆನಪಾಯಿತು, "ಲೇಸ ಮಾಡಿ ಮರುಗದಿರಾ ಮನವೇ !". "ಅಹುದು, ಇದಕ್ಕೂ ಅದಕ್ಕೂ ಏನು ಸಂಬಂಧ. ಆತ ತಪ್ಪು ಮಾಡಿದ್ದರೆ ಅದು ಅವನ ಕೃತಘ್ನತೆಯಾಗಿದ್ದರೆ, ಯಾರಿಗೂ ಉಪದ್ರ ನೀಡದ ಈ ಮುಗ್ಧಜೀವಿಯ ಮೇಲೆ ಏಕೆ ಕೋಪಗೊಳ್ಳಬೇಕು ? ಇವನ ತಮ್ಮನನ್ನು ಮೆಚ್ಚಿಸಲು ನಾವು ಈತನಿಗೆ ಆಶ್ರಯಕೊಟ್ಟಿಲ್ಲ ತಾನೆ ? ಒಳ್ಳೆಯದನ್ನು ಮಾಡಬೇಕು ಎಂದು ಆಶ್ರಯ ಕೊಟ್ಟಿರುವುದು. ಧರ್ಮ ಗುರುವಿನ ಮಾತಿಗೆ, 'ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ' ಎಂಬ ಆದೇಶಕ್ಕೆ ಬೆಲೆಕೊಟ್ಟು ದೇವರನ್ನು ಮೆಚ್ಚಿಸಲು, ನಮ್ಮ ಅಂತರಾತ್ಮದ ಸಂತೃಪ್ತಿಗಾಗಿ ಮಾಡುವ ಒಳ್ಳೆಯ ಕೆಲಸವಿದು. ಒಳ್ಳೆಯದನ್ನು ಮಾಡಿ ಆ ಬಗ್ಗೆ ಮರುಗಬಾರದು" ಎಂದು ಚಿಂತನೆ ಮಾಡಿದೆ. ಇಂಥ ಕೆಲವು ಸಂದಿಗ್ಧ ಪರಿಸ್ಥಿತಿಯಲ್ಲಿ ಅನುಭಾವಿಗಳ ಮಾತು ದಾರಿದೀಪಗಳಾಗುವುವು ಎಂಬುದರಲ್ಲಿ ಸಂದೇಹವೇ ಇಲ್ಲವಷ್ಟೆ.

ಕೂಡಿ ತಪ್ಪದಿರಾ : ವ್ಯಕ್ತಿಗಳಲ್ಲಿ ಪರಸ್ಪರ ಬಾಂಧವ್ಯ ಬೆಳೆಯುತ್ತದೆ. ಸ್ನೇಹಿತರು, ವಿವಾಹದ ಮೂಲಕ ಒಂದಾಗುವ ಪತಿ-ಪತ್ನಿಯರು, ತಂದೆ-ತಾಯಿ-ಮಕ್ಕಳು, ಸಂಘ-ಸಂಸ್ಥೆಗಳ ಮೂಲಕ ಹತ್ತಿರ ಬರುವ ಸದಸ್ಯರು, ಗುರು-ಶಿಷ್ಯರು, ಗುರು-ಭಕ್ತರು ಹೀಗೆಲ್ಲ ಸಂಬಂಧಗಳು ಚಿಗುರೊಡೆಯುತ್ತವೆ. ಮನುಷ್ಯನ ಮನಸ್ಸು ಬಹುದುರ್ಬಲ, ಚಂಚಲ. ಕೂಡಿ ಬದುಕುವ ಗುಣಕ್ಕಿಂತಲೂ ಕಾದಾಡಿ ದೂರವಾಗುವುದೇ ಅದರಲ್ಲಿ ಅಧಿಕವಾಗಿರುತ್ತದೆ. ಏನಾದರೊಂದು ನಿಮಿತ್ತ, ಕಾರಣ, ನೆಪ

ಹುಡುಕಿ ಸಂಬಂಧ ಕಡಿದುಕೊಳ್ಳಲು ಮನಸ್ಸು ಹೆಣಗುತ್ತಿರುತ್ತದೆ. ಹೀಗಾಗಿಯೇ ತಂದೆ-ತಾಯಿ-ಮಕ್ಕಳು ಕೂಡಿ ಬದುಕಲಾರರು; ಗುರು-ಶಿಷ್ಯರು ಕಾದಾಡುವರು; ಸಂಘ-ಸಂಸ್ಥೆಗಳ ಸದಸ್ಯರು ಕಚ್ಚಾಡುವರು, ಮುಖ್ಯ ಕಾರಣವೇದರೆ ವ್ಯಕ್ತಿಯ ಅಹಂ. ಪ್ರತಿಯೊಬ್ಬರೂ ತಾನು ಇನ್ನೊಬ್ಬರಿಗಾಗಿ ದುಡಿಯುತ್ತಿದ್ದೇನೆ, ಮಹಾನ್ ತ್ಯಾಗ ಮಾಡಿದ್ದೇನೆ ಎಂದುಕೊಳ್ಳುವನೇ ವಿನಾ ನನಗಾಗಿ ಅವರು ತ್ಯಾಗ ಮಾಡಿದ್ದಾರೆ ಎಂದು ಭಾವಿಸುವುದೇ ಇಲ್ಲ. ಅತ್ಯಂತ ನಿಕಟ ಸಂಬಂಧವಿರುವ ಪತಿ-ಪತ್ನಿಯರಲ್ಲಿ ಸಹಾ, ಇಂಥ ಅಹಂ ಕಾಡುತ್ತಿರುತ್ತದೆ. 'ನಾನು ನಿಮಗಾಗಿ ತ್ಯಾಗ ಮಾಡಿದ್ದೇನೆ.' ಎಂದು ಹೆಂಡತಿ ವಾದಿಸಿದರೆ 'ನಾನು ನಿಮಗಾಗಿ ದುಡಿಯುತ್ತೇನೆ.' ಎಂದು ಗಂಡ ವಾದಿಸುವನು. ಹೀಗೆ ಆಲೋಚಿಸದೆ 'ಎನಗಿಂತ ಕಿರಿಯರಿಲ್ಲ ; ಇತರರಿಗಿಂತ ಹಿರಿಯರಿಲ್ಲ' ಎಂದು ಪ್ರತಿಯೊಬ್ಬರು ಭಾವಿಸಿದರೆ ತಿಕ್ಕಾಟ ವಿರಸಗಳಿಗೆ ಅವಕಾಶವೇ ಇರದು.

ವೈಯಕ್ತಿಕ ಸಂಬಂಧ ದಾಟಿ ಇನ್ನು ಸಾರ್ವತ್ರಿಕ-ರಾಷ್ಟ್ರೀಯ ಜೀವನಕ್ಕೆ ಬಂದರೆ ಅಲ್ಲಿಯೂ ಸಹ ಕೆಲವರು ತಮ್ಮ ಸ್ವಪ್ರತಿಷ್ಠೆ-ಅಹಂಭಾವದಿಂದ ಪ್ರತಿಯೊಂದನ್ನು ಒಡೆಯುತ್ತಾರೆ. ಪಕ್ಷಗಳನ್ನು ಒಡೆಯುತ್ತಾರೆ, ಸಂಘಟನೆ ಒಡೆಯುತ್ತಾರೆ; ನಮ್ಮ ನಮ್ಮ ಸಂಸ್ಥೆಗಳನ್ನಷ್ಟೆ ನಡೆಸಿಕೊಂಡು ಹೋಗುತ್ತಿದ್ದಾಗ ಈ ಅನುಭವ ಅಷ್ಟಿರಲಿಲ್ಲ. ರಾಷ್ಟ್ರೀಯ ಬಸವ ದಳಗಳನ್ನು ಆರಂಭಿಸಿದ ಮೇಲೆ ಈ ಪ್ರತಿಷ್ಠೆ ಮಾಡುವ ಪ್ರಮಾದ ಎಂತಹುದು ಎಂಬುದು ಅನುಭವಕ್ಕೆ ಬರುತ್ತಿದೆ. ಕೆಲವು ಕಡೆ ಒಂದು ಕುಟುಂಬದ ಜನರಂತೆ ರಾಷ್ಟ್ರೀಯ ಬಸವ ದಳಗಳ ಸದಸ್ಯರು ಇದ್ದಾರೆ. ಇಂಥಲ್ಲಿ ಸಮಸ್ಯೆ ಇರದು. ಮತ್ತೆ ಕೆಲವು ಕಡೆ ಹಾಗಲ್ಲ. ಹಿರಿಯ ಪದಾಧಿಕಾರಿಗಳು ಅಷ್ಟೊಂದು ಕ್ರಿಯಾಶೀಲರಿರುವುದಿಲ್ಲ. ಸಮಿತಿಯಲ್ಲಿ ಯಾರೋ ಒಬ್ಬರು ಸಂಘಟನಾಶಕ್ತಿ, 'ಇದ್ದವರು ನಾನೇಕೆ ಇನ್ನೊಬ್ಬರ ಮಾತು ಕೇಳಲಿ' ಎಂದು ಪ್ರತ್ಯೇಕವಾಗಲು ಯತ್ನಿಸುತ್ತಾರೆ. ಹಿರಿಯರಿಗೆ ಕೋಪ ಬರುತ್ತದೆ. ಇವರೂ ಹಟವಾದಿಗಳು, ಅವರೂ ಹಟವಾದಿಗಳು. 'ನಾನು ಚೆನ್ನಾಗಿ ದುಡಿಯುವ ಸಾಮರ್ಥ್ಯವಿದ್ದವನು; ಇದರ ಕೀರ್ತಿ ಇಡೀ ಗುಂಪಿಗೆ ಏಕೆ ಹೋಗಬೇಕು?' ಎಂಬುದು ಪ್ರತ್ಯೇಕವಾಗುವವರ ಧೋರಣೆಯಾದರೆ, 'ಹೋಗಲಿ ಬಿಡು, ಆತನಿಗೆ ಕೀರ್ತಿಯ ಹುಚ್ಚಿದೆ; ಕೀರ್ತಿಗಾಗಿಯಾದರೂ ಬಸವ ತತ್ತ್ವ ಪ್ರಚಾರ ಮಾಡುತ್ತಾನಲ್ಲ ಎಂದು ಇನ್ನಷ್ಟು ಪ್ರೋತ್ಸಾಹಿಸೋಣ.' ಎಂಬ ಅರಿವು ಇನ್ನಿತರರಿಗೆ ಇರದು, ಕೆಲವರಲ್ಲಿ ತತ್ತ್ವನಿಷ್ಠೆ ಇರುತ್ತದೆ, ಇನ್ನಿತರರೊಡನೆ ಹೊಂದಿಕೊಂಡು ಬಾಳುವ ಗುಣ ಇರದು. ಮತ್ತೆ ಕೆಲವರು ಎಲ್ಲರೊಡನೆ ಪ್ರೀತಿ-ವಿಶ್ವಾಸಗಳಿಂದ ಇರುವರು; ತತ್ತ್ವನಿಷ್ಠೆಯೇ ಇರದು. ಸ್ನೇಹಪೂರ್ಣ ಸ್ವಭಾವ ಇರುವವರ ಕೈಗೆ ಹೊಣೆಗಾರಿಕೆ ಕೊಡಬೇಕೋ, ತತ್ತ್ವನಿಷ್ಠರ ಕೈಗೆ ಕೊಡಬೇಕೋ ಎಂಬ ಸಂದಿಗ್ಧತೆ ನಮಗೆ. ಒಳ್ಳೆಯ ಗುಣವಿದ್ದು ತತ್ತ್ವನಿಷ್ಠೆಯಿಲ್ಲದವರು ಜನಪ್ರೀತಿಗಾಗಿ (ವಿರಕ್ತ

ಮಠಾಧೀಶರು ಹನುಮಂತ-ಗಣಪತಿ ಪ್ರತಿಷ್ಠಾಪನೆಗೆ ಹೋದಂತೆ) ತತ್ತ್ವದ ದಾರಿಯಿಂದ ದೂರ ಸರಿಯಬಹುದು ಎಂಬ ಆತಂಕ ನಮ್ಮದು.

ಮತ್ತೆ ಕೆಲವರಿಗೆ ಅವರ ಕೈ-ನಡೆ-ನುಡಿ ಶುದ್ಧ ಎಂದು ಸಂಘಟನೆಗಳ ಜವಾಬ್ದಾರಿ ಕೊಡುತ್ತಿದ್ದಂತೆಯೇ, ಅವರಲ್ಲಿ ಪ್ರಾರ್ಥನೆ-ಅನುಭವಗೋಷ್ಠಿಗಳಿಗೆ ಬರುವವರನ್ನು ಕಂಡು ಚುಚ್ಚುನುಡಿಯುವ ಸ್ವಭಾವವಿರುತ್ತದೆ. ಇದಕ್ಕೆಲ್ಲ ಏನು ಕಾರಣ ಎಂದರೆ ಎಂಥಾ ಸಣ್ಣ ಮನುಷ್ಯನೂ ತನ್ನದೇ ಸರಿ ಎಂದು ಭಾವಿಸಿ ಒಟ್ಟು ಅಂತರಾತ್ಮಾವಲೋಕನ ಮಾಡಿಕೊಳ್ಳದೇ ಇರುವುದು. ಬಸವಣ್ಣ-ಗಾಂಧೀಜಿಯವರದು ಅಂತರಂಗ ನಿರೀಕ್ಷಣೆಯ ಮಾರ್ಗ. ಈ ವಿಧಾನವನ್ನು ಇಂದು ಬಹುಪಾಲು ಜನರು ಅನುಸರಿಸದೆ ತಮ್ಮ ದಾರಿ ಸರಿಯೇ ಸರಿ ಎಂದು ಸಾಧಿಸುವರು. ಇವರುಗಳು ತಮ್ಮ ಕ್ಷುಲ್ಲಕ ಮನಸ್ಸನ್ನು ತೊರೆದರೆ ಸಂಘಟನೆಗಳು ಎಷ್ಟು ಬಲಗೊಳ್ಳುವವು ಎಂಬ ಉದಾತ್ತ ಚಿಂತನೆ ಹೊಂದಿರುವುದಿಲ್ಲ. ಕೆಲವರಲ್ಲಿ ಸಂಘಟನಾ ಸಾಮರ್ಥ್ಯವಿರುತ್ತದೆ. ಆದರೆ ಮುಂಗೋಪ, ಸಿಡುಕು ಜಾಸ್ತಿ. 'ಹೋಗಲಿ ಬಿಡು, ಇದು ಅವರ ಸ್ವಭಾವ ಹೊಂದಿಕೊಳ್ಳೋಣ' ಎಂದು ಕೆಲವರು ವಿಚಾರ ಮಾಡಿದರೆ ಬಾಕಿಯವರು ಅದೇಕಂತೆ ನಾವೇಕೆ ಈತನ ವರ್ತನೆ ಸಹಿಸಬೇಕು?' ಎಂದು ಒಡಕಿಗೆ ಬೀಜ ಬಿತ್ತಿಯೇ ಬಿಡುವರು. ಇಂಥವರಿಗಾಗಿಯೇ ಧರ್ಮಪಿತರು, "ಕೂಡಿ ತಪ್ಪದಿರಾ" ಎಂದು ಇಷ್ಟು ಮಾರ್ಮಿಕವಾಗಿ ಹೇಳುವರು.

ಬೇಡಿದವರಿಗೆ ಇಲ್ಲೆನ್ನದಿರು : ಯಾವುದೇ ದೃಷ್ಟಿಯಿಂದ ಸಹಾಯ ಯಾಚಿಸಿದವರಿಗೆ ಇಲ್ಲೆನ್ನದೆ ಸಹಾಯ ಮಾಡಬೇಕು. ಊಟ-ನೀರು-ಬಟ್ಟೆ-ಧನ-ವಿದ್ಯೆ ಮುಂತಾಗಿ ಕೈಲಾದಷ್ಟು ನೆರವು ನೀಡಬೇಕು. ಈ ದಾಸೋಹ (ದಾನ) ಜೀವನಾವಶ್ಯಕತೆ ಕುರಿತು ಇರಬೇಕೇ ವಿನಾ ವಿಷಯ-ವಿಲಾಸ ಕುರಿತು ಅಲ್ಲ. "ಹಸಿವಾಗಿದೆ ಅನ್ನ ಕೊಡಿರಿ" ಎಂದಾಗ ನೆರವು ನೀಡಬೇಕು. "ನೆನಪಾಗಿದೆ, ಸೆರೆ ಕುಡಿಯಬೇಕು" ಎಂದಾಗ ದಾನ ಮಾಡಬಾರದು. ಯಾವುದಿಲ್ಲದೆ ಮನುಷ್ಯ ಬದುಕಲಾರನೋ ಅವು ಜೀವನಾವಶ್ಯಕತೆಗಳು. ನೀರು ಅವಶ್ಯಕತೆ-ಸೆರೆ ಭೋಗ ; 'ನಾನು ವಿದ್ಯಾರ್ಥಿ ಶುಲ್ಕ ಕಟ್ಟಬೇಕು, ಪುಸ್ತಕ ಖರೀದಿಸಬೇಕು,' ಎಂದಾಗ ಎಷ್ಟಾದರೂ ದಾನ ಮಾಡಬೇಕು. 'ನನಗೆ ಓದಿ ಓದಿ ಬೇಸರವಾಗಿದೆ ಸಿನಿಮಾ ನೋಡಬೇಕು ಹಣ ಕೊಡಿ' ಎಂದಾಗ ಬೈಯಬೇಕು. ಜಗತ್ತಿನ ಕಷ್ಟಕಾರ್ಪಣ್ಯ ನೋಡಿ ನೋಡಿಯೂ ಸಹ ಮನಸ್ಸನ್ನು ಕಲ್ಲು ಮಾಡಿಕೊಳ್ಳಬಾರದೆಂದು ಧರ್ಮಪಿತರು ಹೇಳುವರು.

ನಾಡಮಾತು ಬೇಡ : ಲೋಕಾರೂಢಿಯ ಮಾತುಗಳನ್ನು ಕಿವಿಯಲ್ಲಿ ಹಾಕಿಕೊಳ್ಳಬಾರದು. ಏಕೆಂದರೆ ನೀತಿ-ನ್ಯಾಯಗಳ ವಿಷಯದಲ್ಲಿ ಲೋಕದ ಜನರನ್ನು

ಕೇಳಿದರೆ ಅವರು ಕಲಿಸುವ ಪಾಠವೇ ಬೇರೆ. 'ಅಯ್ಯೋ ಬಿಡಯ್ಯಾ, ನೀನು ಸತ್ಯ ಹರಿಶ್ಚಂದ್ರನ ಮೊಮ್ಮಗನೇನೊ. ಹೀಗೆ ಸತ್ಯ-ನೀತಿ ಎಂದು ಕುಳಿತರೆ ನೀನು ಉದ್ಧಾರವಾದಂತೆಯೆ. ಈ ಜಗತ್ತಿನಲ್ಲಿ ಯಾರಿಗೂ ಉಪಕಾರ ಮಾಡಬಾರದಯ್ಯಾ. ತನ್ನದನ್ನು ತಾನು ನೋಡಿಕೊಂಡರೆ ಸಾಕು. ಬಡತನ-ಕಷ್ಟಕಾರ್ಪಣ್ಯ ಇದ್ದವೇ. ಅವನ್ನೆಲ್ಲ ತೆಗೆದು ಹಾಕಲು ಆದೀತೆ?' ಇಂಥ ಮಾತುಗಳನ್ನೇ ಅವರು ಹಿತೋಪದೇಶವೆಂದು ನೀಡುವುದು. ಹಣವಿದ್ದವರೆಲ್ಲ ಜಗತ್ತಿಗೆ ಉಪಕಾರ ಮಾಡರು; ಇನ್ನೊಬ್ಬರ ಕಷ್ಟ-ಕಾರ್ಪಣ್ಯಕ್ಕೆ ಸ್ಪಂದಿಸುವವರೇ-ಆರ್ಥಿಕವಾಗಿ ಅವರು ದುರ್ಬಲರಿದ್ದರೂ, ಇನ್ನೊಬ್ಬರಿಗೆ ನೆರವು ನೀಡುವುದು. ಪ್ರತ್ಯಕ್ಷವಾಗಿ ನಮ್ಮ ಜೀವನದಲ್ಲಿ ಸಾಕಷ್ಟು ಅನುಭವ ಪಡೆದಿದ್ದೇವೆ. ಪ್ರಾಥಮಿಕ ಶಾಲೆಯ ಶಿಕ್ಷಕರು ದೇಣಿಗೆ ಕೊಟ್ಟ ಸಂಖ್ಯೆಗೆ ಹೋಲಿಸಿದರೆ ಪ್ರೌಢಶಾಲೆಯವರು ಕಡಿಮೆ; ಕಾಲೇಜು ಶಿಕ್ಷಕರು ಇನ್ನೂ ಕಡಿಮೆ; ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳಿಗಂತೂ ದಾನ-ದೇಣಿಗೆ ಕೊಟ್ಟು ಅಭ್ಯಾಸವೇ ಇರದು. ಅಧಿಕಾರಿಗಳಲ್ಲಿಯೂ ಅಷ್ಟೆ. ಸಾಮಾನ್ಯ ಅಧಿಕಾರಿಗಳು ಕೈಯೆತ್ತಿ ದಾನ ಮಾಡಿಯಾರೇನೊ. ಉನ್ನತ ದರ್ಜೆಯ ಅಧಿಕಾರಿಗಳು ಎಂದೆಂದೂ ದಾನ ಮಾಡುವುದಿಲ್ಲ. ಒಳ್ಳೆಯವರು ಇದ್ದರೆ ಲಂಚ ರುಷುವತ್ತು ಇಲ್ಲದೆ ತಮ್ಮ ತಮ್ಮ ವ್ಯಾಪ್ತಿಯಲ್ಲಿ ನಾಲ್ಕಾರೂ ಜನಕ್ಕೆ ಸಹಾಯ ಮಾಡಬಹುದೇನೊ. ಭ್ರಷ್ಟ ಅಧಿಕಾರಿಗಳಾದರಂತೂ ಯಾರನ್ನೂ ಬಿಡುವುದಿಲ್ಲ; ಎಂಥಾ ಬಡವನಿದ್ದರೂ ಅವನ ಬಳಿ ಬಿಚ್ಚಿಸಿಯೇ ಬಿಡುವರು; ಇಲ್ಲವೇ ಕೆಲಸ ಮಾಡಿಕೊಡದೆ ಅವನನ್ನು ನಿರ್ಜೀವಗೊಳಿಸುವರು.

"ನಾಡ ಮಾತು ಬೇಡ"ಎಂಬಲ್ಲಿ ನೀತಿ ಬೋಧೆಗಾಗಿ ಲೋಕಾರೂಢಿಯ ಜನರನ್ನು ಕೇಳಬೇಡ; 'ಶರಣರಲ್ಲಿ ಸೆರಗೊಡ್ಡಿ ಬೇಡಿಕೊ' ಎಂದು ಧರ್ಮಪಿತರು ಹೇಳುವರು. ಏಕೆಂದರೆ ಶರಣರದು ದೇವಸಾಕ್ಷಿಯ ಬದುಕು, ಅಂತಸ್ಸಾಕ್ಷಿಯ ಬದುಕು. ಹಿಮಾಲಯವು ಕರಗಿ ನೀರಾದರೂ, ಸೂರ್ಯ ಇದ್ದಲಿಯ ಚೂರಾದರೂ, ಸಮುದ್ರವು ಕಾಯ್ದು ಕುದಿದರೂ ಶರಣರು-ಸಜ್ಜನರು ಅನ್ಯಾಯದ, ಅಸತ್ಯದ ದಾರಿಗೆ ಎಳಸರು. ಆದ್ದರಿಂದ ಒಳ್ಳಿತನ್ನು ನಡೆಯಲು ಅವರನ್ನು ಆದರ್ಶವಾಗಿಟ್ಟುಕೊಳ್ಳಬೇಕು. ಒಳ್ಳಿತನ್ನು ತಿಳಿಯಲು ಅವರಲ್ಲಿಯೇ ಜ್ಞಾನಭಿಕ್ಷೆ ಕೇಳಬೇಕು. ಏಕೆಂದರೆ ಅವರು ತೋರುವುದು ತಾತ್ಕಾಲಿಕ ಸುಖದ ದಾರಿಯಲ್ಲ, ನಿತ್ಯಸುಖದ ದಾರಿ. ★ ★

ಚಂದಾದಾರರ ಗಮನಕ್ಕೆ

ಕಲ್ಯಾಣ ಕಿರಣ ಮಾಸ ಪತ್ರಿಕೆಯು ಅಂಚೆಯಲ್ಲಿ ಬರುತ್ತಿದ್ದಂತೆಯೇ ಚಂದಾ ಸಂಖ್ಯೆ ಬರೆದಿಟ್ಟುಕೊಳ್ಳಿರಿ. ಪತ್ರ ವ್ಯವಹಾರ ಮಾಡುವಾಗ ತಪ್ಪದೆ ಚಂದಾ ಸಂಖ್ಯೆ ಬರೆಯಿರಿ.

—ವ್ಯವಸ್ಥಾಪಕರು
ಕಲ್ಯಾಣ ಕಿರಣ

ಜಿ. ಎಮ್. ಪಾಟೀಲರ ಪತ್ರ

ಜಿ. ಎಮ್. ಪಾಟೀಲ.
ಕಲ್ಯಾಣ ನಗರ,
೫ ನೇ ಅಡ್ಡರಸ್ತೆ, ಧಾರವಾಡ-೭ ದಿ. ೨೯-೬-೯೩

ಪೂಜ್ಯ ಮಾತಾಜಿ ಅವರಿಗೆ ಅನಂತ ಶರಣು ಶರಣಾರ್ಥಿಗಳು. ಬಸವಣ್ಣನ ಪ್ರೇರಣೆಯಿಂದ ಬಹಳ ದಿವಸಗಳ ನಂತರ ಈ ಪತ್ರ ಬರೆದಿದ್ದೇನೆ.

ವಿಷಯ :- (೧) ಷಡಂಗ ದಾಸೋಹ
(೨) ಬಸವಣ್ಣನವರ ವಚನಗಳು : ಪ್ರಮಾಣಿತ ಆವೃತ್ತಿ

ತಾವು ಜೂನ್ ೯೩ ರ ಕಲ್ಯಾಣ ಕಿರಣ ಸಂಚಿಕೆಯಲ್ಲಿ ಷಡಂಗ ದಾಸೋಹ ಕುರಿತು ಬರೆದಿದ್ದೀರಿ. ಅದಕ್ಕೆ ನಾನು ಇನ್ನೊಂದು ದಾಸೋಹವನ್ನು ಜೋಡಿಸುವೆನು. ಅದೇನೆಂದರೆ ಜ್ಞಾನ ದಾಸೋಹ. ಇದರ ಬಗ್ಗೆ ಅರಿವು ಮೂಡಿದ ನಂತರ ೧೯೭೪ ರಿಂದ ನಾನು ಜ್ಞಾನ ದಾಸೋಹಿ ಎಂಬ ಅಂಕಿತದಲ್ಲಿ ಬರೆಯುತ್ತಿದ್ದೇನೆ. 'ಅಮರ ಬಸವಣ್ಣ' ಪುಸ್ತಕವು ಹೀಗೆಯೆ ಪ್ರಕಟವಾಗಿದೆ. ಬಸವಣ್ಣನವರು ಅಪೂರ್ವವಾಗಿ ಅಪ್ರತಿಮವಾಗಿ ಜ್ಞಾನ ದಾಸೋಹ (ಪ್ರಸಾರ) ಪ್ರತಿಪಾದಕರಾಗಿದ್ದಾರೆ. "ಜ್ಞಾನದ ಬಲದಿಂದ ಅಜ್ಞಾನದ ಕೇಡು, ಸತ್ಯದ ಬಲದಿಂದ ಅಸತ್ಯದ ಕೇಡು" ಎಂದು ನುಡಿದು ಆದ್ಯ ಪ್ರವಾದಿಯಾಗಿದ್ದಾರೆ. ಆದ್ದರಿಂದ ನಾವು ಬಸವರು ತಪ್ಪದೆ ಇದನ್ನು ಗಮನಿಸಬೇಕು. **ಜ್ಞಾನ ದಾಸೋಹಕ್ಕೆಂದೇ ವಚನ ವಾಙ್ಮಯವು ಸೃಷ್ಟಿಯಾಗಿದೆ.**

ಬಸವಣ್ಣನವರ ವಚನಗಳನ್ನು ಶುದ್ಧೀಕರಿಸಿ, ಸಂಶೋಧಿಸಿ, ಪರಿಷ್ಕರಿಸಿ ಪ್ರಮಾಣಭೂತವಾದ ಆವೃತ್ತಿಯನ್ನು ಕೂಡಲ ಸಂಗಮದ ಬಸವ ಪೀಠದಿಂದ ಪ್ರಕಟಿಸುವುದು, ಶಿಕ್ಷಣಕ್ಕೆ, ಅಭ್ಯಾಸಕ್ಕೆ, ಪಠಣಕ್ಕೆ ಅತ್ಯಂತ ಅಗತ್ಯವಾಗಿದೆ. ಏಕೆಂದರೆ ಸದ್ಯ ಲಭ್ಯವಿರುವ ಪ್ರತಿಗಳು - ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟನೆ, ನಂತರದಲ್ಲಿ ಅದನ್ನು ಧಾರವಾಡದ ಮುರುಘಾಮಠದವರು ಪ್ರಕಟಿಸಿರುವುದು ಅಲ್ಲದೆ ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿಯ ಪ್ರಕಟನೆಗಳೂ, ಅವಿಶ್ವಸನೀಯ, ಅಸಾಧು, ಕಲುಷಿತ ಜಾತಿವಾದಿ (ಜಂಗಮ) ಜಂಗಮದಿಂದ, ಪಟ್ಟಭದ್ರ ಹಿತಾಸಕ್ತಿಗಳಿಂದ ಅಲ್ಲದೆ ವಿಕೃತಕಾಮನೆ ವಿರಕ್ತ (ಸಂನ್ಯಾಸಿ)ರ ಪೀತದೃಷ್ಟಿ, ಕಾಳು (ಕಾಕ) ದೃಷ್ಟಿ, ಹಸ್ತಕ್ಷೇಪ ಮುಂತಾದವುಗಳಿಂದ ಆಗಿವೆ. ಈ ಕುರಿತು ಬೀದರಿನ ಕನ್ನಡ ದಿನ ಪತ್ರಿಕೆಯಲ್ಲಿ ಬಸವ ಧರ್ಮ ರಕ್ಷಣೆಯ ಕುರಿತು ಲೇಖನ ಬರೆದಿದ್ದೇನೆ. ಅದನ್ನು ಗಮನಿಸಿರಬಹುದು. ಅದರಲ್ಲಿ [೧] ಪಂಚಾಕ್ಷರಿ ಮಂತ್ರ. [೨] ಸಂಸಾರ ಹೇಯಸ್ಥಲ ಇವುಗಳೆಲ್ಲವನ್ನು ನಿಷೇಧಿಸಿ ಅವನ್ನು ಬಿಟ್ಟು ಬಿಡಬೇಕಾಗಿದೆ.-(ಅ) ಶಿವಪಂಚಾಕ್ಷರ ಮಂತ್ರ-ಬಸವಣ್ಣನೆ

ಮಂತ್ರ ಪುರುಷನಾಗಿರುವಾಗ ಅವನ ಹೆಸರನ್ನು ಮಂತ್ರವಾಗಿ ಜಪಿಸುತ್ತಿರುವಾಗ ಅಸತ್ಯ ಅಸಾಧುವಾಗಿ ಶಿವಪಂಚಾಕ್ಷರಿ ಮಂತ್ರವನ್ನು ಹೇಳಿ ಕೊಟ್ಟ ಕೃತಕವಾಗಿ ಬರೆದಿರುವುದು ಅಕ್ಷಮ್ಯ. ಅದರಂತೆಯೆ ತಾಮಸ ನಿರಸನ ಸ್ಥಲವೂ ಸ್ವರಚಿತ, ಕಲ್ಪಿತ, ಸ್ವಾರ್ಥಪ್ರೇರಿತ ಬರಹ ಪ್ರಕಟನೆಯಾಗಿದೆ. ಇವೆಲ್ಲ ಇನ್ನು ಮುಂದಿನ ಆವೃತ್ತಿಗಳಲ್ಲಿ ಮರೆಯಾಗಬೇಕಾಗಿದೆ. ಇಲ್ಲಿ ಹೇಳಿರುವುದನ್ನು ಸೂಕ್ತವಾಗಿ ಪರೀಕ್ಷಿಸಿ ಕಾರ್ಯಗೈದರೆ ಸಂತೃಪ್ತಿಯಾಗುವುದು. ನನ್ನ ಬಸವ ಸೇವೆ ಸಾರ್ಥಕವಾಗುವುದು. ದಯವಿಟ್ಟು ಬರೆಯಿರಿ. ಇನ್ನೇನು ವಿಶೇಷವಿಲ್ಲ.

ತಮ್ಮವನಾದ

ಜಿ. ಎಮ್. ಪಾಟೀಲ, (ಜ್ಞಾನ ದಾಸೋಹಿ)

ಚಿಂತನೆಗಾಗಿ

–ಮಾತಾಜಿ.

ಧಾರವಾಡದ ಶರಣ. ಜಿ. ಎಮ್. ಪಾಟೀಲ, ವಯೋವೃದ್ಧರು. ಆದರೆ ಅವರ ಬತ್ತದ ಉತ್ಸಾಹ, ಬರವಣಿಗೆ ನೋಡಿದರೆ ಆಶ್ಚರ್ಯವೆನಿಸುತ್ತದೆ. ಬೀದರಿನ ಉತ್ತರ ಕರ್ನಾಟಕ ಪತ್ರಿಕೆಯಲ್ಲಿ "ಜ್ಞಾನ ದಾಸೋಹಿ" ಎಂಬ ಕಾವ್ಯನಾಮದಿಂದ ಅನೇಕ ಲೇಖನಗಳನ್ನು ಬರೆದಿದ್ದಾರೆ, ಬರೆಯುತ್ತಲಿದ್ದಾರೆ. ಕಲ್ಯಾಣ ಕಿರಣದ ಮೇ-ಜೂನ್ ಸಂಚಿಕೆ ನೋಡಿ ಬಹಳ ಸಂತೋಷದಿಂದ "ಷಡಂಗ ದಾಸೋಹ" ಬರಹವನ್ನು ಕುರಿತು ಬರೆದಿದ್ದಾರೆ. ಇದಕ್ಕೆ ಜ್ಞಾನ ದಾಸೋಹವು ಸೇರ್ಪಡೆಯಾಗಬೇಕು. ಶರಣರ ಬೋಧೆಯ ಉದ್ದೇಶವೇ ಅದು ಎಂದೂ ಸೂಚಿಸಿದ್ದಾರೆ. ಸಲಹೆ ಸ್ತುತ್ಯಾರ್ಹ. ತನು–ಮನ–ಧನ–ವಚನ–ಸಮಯ–ಪ್ರಾಣ ಈ ಆರನ್ನೂ ದಾಸೋಹಂ ಭಾವದಿಂದ ಸಮರ್ಪಿಸುವ ಬಗ್ಗೆ ನಾನು ಬರೆದಿದ್ದೇನೆ. 'ಜ್ಞಾನ ದಾಸೋಹ'ವು ಅತ್ಯಗತ್ಯ. ಇದು ಒಂದು ಸಾಧನಾಂಗ (means) ಅಲ್ಲ ಸಿದ್ಧಿ, ಧ್ಯೇಯ. ನಾನು ತನು–ಮನ–ಧನ–ವಚನ–ಸಮಯ–ಪ್ರಾಣ ಈ ಆರನ್ನೂ ಸಾಧನಗಳನ್ನಾಗಿ ಮಾಡಿಕೊಂಡು ಬೇರೆ ಬೇರೆ ರೀತಿಯಲ್ಲಿ ಸೇವೆ ಮಾಡುವದನ್ನು ಪ್ರಸ್ತಾಪಿಸಿದ್ದೇನೆ. ಆದ್ದರಿಂದ ಜ್ಞಾನ ದಾಸೋಹವನ್ನು ಏಳನೆಯದಾಗಿಟ್ಟರೆ ಸೂಕ್ತವೆನಿಸುತ್ತಿಲ್ಲ. ನನ್ನ ವಿವರಣೆ ಹೀಗಿದೆ :

ನಾವು ಜ್ಞಾನದಾಸೋಹವನ್ನು ಈ 6 ಸಾಧನಗಳಿಂದಲೂ ಮಾಡಬೇಕು.

1. ತನುವಿನಿಂದ—ಸ್ವತಃ ಹೋಗಿ ಧರ್ಮ(ಜ್ಞಾನ) ಪ್ರಚಾರ ಮಾಡುವುದು.
2. ಮನದಿಂದ —ಮನಸ್ಸು, ತನ್ನ ಇನ್ನಿತರ ಸಂಗಾತಿಗಳಾದ ಚಿತ್ತ-ಬುದ್ಧಿಗಳನ್ನು ಕೂಡಿಕೊಂಡು ಕೆಲಸ ಮಾಡುವುದಷ್ಟೆ ; ಮನಸ್ಸು ಕಳಕಳಿಯಿಂದ ಬುದ್ಧಿಯು ಇತರರನ್ನು ಮನವೊಲಿಸುವ ರೀತಿಯಲ್ಲಿ ಕಾರ್ಯ ಮಾಡಬೇಕು.

3. ಧನದಿಂದ —ನಾವು ಗಳಿಸಿದ ಸಂಪತ್ತು ಪುನಃ ಜ್ಞಾನ ದಾಸೋಹಕ್ಕೆ ಬಳಕೆಯಾಗಬೇಕು. ಪುಸ್ತಕ ಮುದ್ರಣ, ಅವುಗಳ ವಿತರಣೆ ಇತ್ಯಾದಿ ಜ್ಞಾನ ಪ್ರಚಾರಕ್ಕೆ ವಿವಿಧ ಮಾಧ್ಯಮಗಳನ್ನು ಬಳಸಿಕೊಳ್ಳಲು ಹಣವನ್ನು ವಿನಿಯೋಗಿಸುವುದು.
4. ವಚನದಿಂದ—ನಾಲಿಗೆ (ವಾಗ್ಮಿತ್ವ)ಯ ಮೂಲಕವು ಇನ್ನಿತರರಿಗೆ ಧರ್ಮದಲ್ಲಿ, ಒಳ್ಳೆಯ ಮೌಲ್ಯಗಳಲ್ಲಿ ಶ್ರದ್ಧೆ ಹುಟ್ಟಿಸುವುದು.
5. ಸಮಯ —ಜ್ಞಾನ ದಾಸೋಹಕ್ಕಾಗಿ ಹೆಚ್ಚಿನ ಸಮಯವನ್ನು ಅಥವಾ ಸಂಪೂರ್ಣ ತ್ಯಾಗಿಗಳು ತಮ್ಮ ಇಡೀ ಜೀವನವನ್ನೇ ಮೀಸಲಿಡುವುದು.
6. ಪ್ರಾಣ —ಜೀವಕ್ಕೆ ವಿಪತ್ತು ಬಂದರೂ, ಶರೀರಕ್ಕೆ ಬಾಧೆಯಾದರೂ ಇತರರಿಂದ ಬೆದರಿಕೆ ಬಂದರೂ ಹೆದರದೆ ಜ್ಞಾನ ದಾಸೋಹಕ್ಕೆ ಪ್ರಾಣವನ್ನು ಮೀಸಲಿಡುವುದು.

ಹೀಗೆ ನನ್ನ ವಿವರಣೆ ಇರುವುದರಿಂದ 'ಷಡಂಗ' ದಾಸೋಹವು ಅನ್ನದಾಸೋಹ, ಜ್ಞಾನ ದಾಸೋಹ, ವಿದ್ಯಾ ದಾಸೋಹ–ಹೀಗೆ ಹಲವಾರು ಗುರಿಗಳನ್ನು ಸಾಧಿಸಬಲ್ಲುದು ಎನಿಸುತ್ತದೆ.

ಬಸವ ಧರ್ಮ—ಸೂತ್ರ

ಶರಣ. ಜಿ. ಎಂ. ಪಾಟೀಲರು 'ಬಸವ ಧರ್ಮ' ಪದ ಬಳಕೆಯನ್ನು ಬಹಳ ಮೆಚ್ಚಿಕೊಂಡಿದ್ದಾರೆ. ಇದಕ್ಕೇ ಒತ್ತು ಕೊಡಬೇಕು ಎಂದು ಒತ್ತಾಯ ಮಾಡಿ ಹೇಳಿದ್ದಾರೆ. ಅವರು 'ಬಸವ ತತ್ತ್ವ' ಎಂದು ಬಳಸುವುದು ಬೇಡ, ಆದರ ಬದಲು 'ಬಸವ ಸೂತ್ರ' ಎನ್ನುವುದು ಸರಿ ಎಂದಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ಬಸವಣ್ಣನವರು ಒಂದು ಸೂತ್ರದಂತೆ ಅಂದೂ ಅಸಂಖ್ಯಾತರನ್ನು ಬಂಧಿಸಿದರು. ಇಂದೂ ಬಂಧಿಸುತ್ತಿರುವರು. ಅದೇ ರೀತಿ ಅವರು ಕೊಟ್ಟ ಧರ್ಮ, ತತ್ತ್ವ ಸಮುಚ್ಚಯ, ವಾದ (ism) ಕೂಡ ಅನೇಕರನ್ನು ಬಂಧಿಸುತ್ತಿದೆ. ಆದರೆ ಬಸವಣ್ಣನವರ ತತ್ತ್ವಗಳಿಗೆ ಸೂತ್ರ ಎಂದು ಬಳಸುವುದು ಅದೂ ಬಸವ ತತ್ತ್ವಸೂತ್ರ, ಬಸವ ಧರ್ಮ ಸೂತ್ರ ಎನ್ನದೆ 'ಬಸವ ಸೂತ್ರ' ಎನ್ನುವುದು ಹೇಗೆ ಸರಿಯಾದೀತು ? 'ಬಸವ ತತ್ತ್ವ' ಎಂಬ ಪದ ಬಳಕೆ ತಪ್ಪಲ್ಲ, ಬಹಳ ಸೂಕ್ತವಾದುದು. ಏಕೆ ಶರಣ. ಜಿ. ಎಂ. ಪಾಟೀಲರು ಇದರಲ್ಲಿ ಕುಂದನ್ನು ಅರಸುತ್ತಿರುವರೊ ತಿಳಿಯದಾಗಿದೆ.

ಬಸವ ಧರ್ಮ—ಬಸವಣ್ಣನವರು ಸ್ಥಾಪಿಸಿ, ರೂಪಿಸಿಕೊಟ್ಟ ಧರ್ಮ.

ಬಸವ ತತ್ತ್ವ—ಬಸವಣ್ಣನವರು (ಮತ್ತು ಅದೇ ಪಡಿಯಚ್ಚಿನಲ್ಲಿ ವಚನ ಸಾಹಿತ್ಯ ರಚಿಸಿದ ಸಮಕಾಲೀನ ಶರಣರು) ಒಂದು ವಿಶಿಷ್ಟ

ತತ್ತ್ವ (philosophy)ವನ್ನು ಸಿದ್ಧಾಂತ (ism)ವನ್ನು
ಕೊಟ್ಟರು. ಸಮಾನತೆ-ಏಕೇಶ್ವರವಾದ-ಪ್ರಗತಿಪರ ಚಿಂತನೆ
ಯನ್ನು ಒಳಗೊಂಡುದು ಇದು. ಅತಿವರ್ಣಾಶ್ರಮ ಸಮಾಜ
ವ್ಯವಸ್ಥೆಯಲ್ಲಿ ನಂಬಿಕೆಯುಳ್ಳುದು ಇದು.

ಆಂಗ್ಲಭಾಷೆಯಲ್ಲಿ ಬುದ್ಧಿಸಮ್, ಜೈನಿಸಮ್, ಮಾರ್ಕ್ಸಿಸಮ್, ಗಾಂಧಿಯಿಸಮ್
ಬಸವಾಯಿಸಮ್ ಎಂದು ಹೇಳಿಬಿಟ್ಟರೆ ಅದು ಸಮಗ್ರವಾಗಿ ಒಂದು ಪರಿಕಲ್ಪನೆ
ಕೊಡುವುದು. ಅದನ್ನು ಭಾರತೀಯ ಭಾಷೆಗೆ ತರ್ಜುಮೆ ಮಾಡುವಾಗ ಬೌದ್ಧ
ಧರ್ಮ, ಬೌದ್ಧ ತತ್ತ್ವ ಎಂದು ಬರೆಯಬೇಕಾಗುತ್ತದೆ. ಬಸವವಾದ ಎಂದು 'ಬಸವಾ
ಯಿಸಮ್' ಅನ್ನು ತರ್ಜುಮೆ ಮಾಡಬಹುದು. ಆದರೆ ತತ್ತ್ವ ಎಂಬ ಪದ ಸೇರಿಸಿದರೆ
ಮಾತ್ರ ಅರ್ಥವು ಸ್ಫುಟವಾಗುವುದು. ಆದ್ದರಿಂದ ಬಸವ ತತ್ತ್ವ, ಶರಣ ತತ್ತ್ವ
ಎಂದು ಬಳಸುವುದು ತಪ್ಪಲ್ಲ. ಬುದ್ಧ ಧರ್ಮಾನುಯಾಯಿಗಳಿಗೆ ಬೌದ್ಧರು ಎಂದು ಕರೆ-
ಯುವಂತೆ,ಬಸವ ಧರ್ಮದ ಅನುಯಾಯಿಗಳನ್ನು ಕರೆಯುವ ಬಗ್ಗೆ "ಬಸವರು" "ಎಂಬ
ಪದವನ್ನು ಶರಣ. ಜಿ. ಎಂ. ಪಾಟೀಲರು ಬಳಸಿದ್ದಾರೆ: ಇದು ಸರಿಯಾದೀತೆ?
ಬಸವರು ಎಂದು ಪ್ರಯೋಗ ಮಾಡಿದಾಗ ನಮಗೆ ಅರ್ಥವಾಗುವುದೇನೆಂದರೆ, ಬಸವಣ್ಣ
ನವರು ಎಂಬ ಹೆಸರಿನ ಸಂಕ್ಷಿಪ್ತ ರೂಪವಿದು ಎಂದು ಅಥವಾ ಕೆಲವು ಅಪಕ್ವ ಬರಹ
ಗಾರರು ಬಸವನು ಅಲ್ಲಿಗೆ ಹೋದ, ಇಲ್ಲಿಗೆ ಬಂದ ಎಂದು. 'ಏಕವಚನದಲ್ಲಿ ಹಗುರವಾಗಿ
ಸಂಬೋಧಿಸುವುದನ್ನು ತಪ್ಪಿಸಲು ಹೀಗೆ **"ಬಸವರು"** ಎಂದು ಪ್ರಯೋಗಿಸಲಾ
ಗಿದೆ' ಎಂಬುದಾಗಿ. ಬುದ್ಧ-ಬೌದ್ಧರು ಎಂಬಷ್ಟು ಸರಳವಾಗಿ ಬಸವಣ್ಣ-ಬಸವರು
ಎನ್ನಲು ಬರದು ಎಂಬುದು ಗಮನಾರ್ಹ.

ಆದ್ದರಿಂದ ಅನುಯಾಯಿಗಳಿಗೆ ಬಸವಾಯತ, ಬಸವ ಧರ್ಮಿ, ಬಸವಾನು
ಯಾಯಿ ಎಂದು ಕರೆಯುವುದು ಬಹಳ ಸೂಕ್ತ. ರೂಢಿಯಲ್ಲಿ ತರುವಾಗಲೇ ಸೂಕ್ತ
ಪದವನ್ನು ಬಳಕೆಗೆ ತರಬೇಕು. ಬಸವಧರ್ಮಿ ಎಂಬ ಪದ ಅರ್ಥಗರ್ಭಿತವಿದೆ, ಬಸವಾ
ಯತರೂ ಸಹ ಒಂದೇ ಪದವಾಗಿ ಚೊಕ್ಕವಾಗಿದೆ. 'ಬಸವಾನುಯಾಯಿ' ಅಷ್ಟೊಂದು
ಸುಲಭವಿಲ್ಲ. ಏಕೆಂದರೆ 'ಶರಣು ಮಾಡು' ಎಂಬ ಸುಂದರ ಪದ ಗ್ರಾಮೀಣ ಜನರ
ಕೈಲಿ ಸಿಕ್ಕು 'ಸಣ್ಣ ಮಾಡು', 'ಗುಂಡು ಕರಡಿಗೆ' ಹೋಗಿ **'ಗುಂಡಗಡಿಗಿ'** ಆದಂತೆ
ಬಸವಾನುಯಾಯಿ ಹೋಗಿ **'ಬಸವಾನುನಾಯಿ'** ಆಗಲು ತಡ ಹಿಡಿಯುವುದೇ
ಇಲ್ಲ. (ಈಗ ಗುಣದಿಂದಲಷ್ಟೆ ಆದವರು ಆಗ ಭಾಷೆಯ ಬಳಕೆಯಲ್ಲೂ ಆಗುವರು !)
ಆದ್ದರಿಂದ ಶರಣ. ಜಿ. ಎಂ. ಪಾಟೀಲರು ಅನುಯಾಯಿಗಳಿಗೆ **ಬಸವರು** ಎಂಬ
ಪ್ರಯೋಗದ ಬದಲು ಬಸವಾಯತ, ಬಸವ ಧರ್ಮಿ ಎಂದು ಬಳಸುವುದು
ಸೂಕ್ತವಲ್ಲವೆ ?

★

"ಕುಮಾರ ಕಕ್ಕಯ್ಯನ ವಚನಗಳು"

ಈ ಗ್ರಂಥದ ಬಗ್ಗೆ ಕೆಲವೊಂದು ವಿಮರ್ಶೆ ಮತ್ತು ಅನಿಸಿಕೆಗಳು

೧] ಡಾ॥ ಸಿದ್ದಯ್ಯ ಪುರಾಣಿಕ (ಕಾವ್ಯಾನಂದ)

ಪತ್ರಿಕೆಗಳಲ್ಲಿ ನಿಮ್ಮ ಉದ್ಬೋಧಕ ವಚನಗಳನ್ನು, ವೈಚಾರಿಕ ಲೇಖನಗಳನ್ನು ಓದಿ ಪ್ರಭಾವಿತನಾಗಿದ್ದ ನಾನು, ನಿಮ್ಮ ಈ ವಚನ ಸಂಗ್ರಹವನ್ನು ಓದಿ ಪುಲಕಿತನಾದೆ. ಎಷ್ಟೊಂದು ವಿಷಯಗಳ ಬಗ್ಗೆ ಎಷ್ಟೊಂದು ಆಳವಾಗಿ ಆಲೋಚಿಸಿರುವಿರಿ; ಅವುಗಳಿಗೆ ಎಷ್ಟೊಂದು ಪ್ರಾಮಾಣಿಕ ಅಭಿವ್ಯಕ್ತಿಯನ್ನು ನೀಡಿರುವಿರಿ. ನಿಮ್ಮ ೭ ವಚನಗಳಲ್ಲಿ ಮನೋಜ್ಞವಾಗಿ ಮೂಡಿನಿಂತಿರುವ, ನಿಮ್ಮ ಮಾನವೀಯ ದೃಷ್ಟಿ, ೧೨ ವಚನಗಳಲ್ಲಿ ನೀವು ಕಂಡಿರಿಸಿರುವ ಬಸವಣ್ಣನವರ ಮಹೋನ್ನತ ಮೂರ್ತಿಸ್ವರೂಪ, ೧೧ ವಚನಗಳಲ್ಲಿ ನೀವು ವಿಶದೀಕರಿಸಿರುವ ಬಸವ ಧರ್ಮದ ಅನನ್ಯತೆ, ಇನ್ನುಳಿದ ಅನೇಕ ವಚನಗಳಲ್ಲಿ ಸುಸ್ಪಷ್ಟವಾಗಿರುವ ನಿಮ್ಮ ಸಾಮಾಜಿಕ ಕ್ರಾಂತಿಯ ಕಳಕಳಿಗಳು, ಓದುಗರ ಮೇಲೆ ಅಚ್ಚಳಿಯದ ಮುದ್ರೆಯನ್ನೊತ್ತುವಂಥವುಗಳಾಗಿವೆ. ಶಿವಾನುಭವ ಲೋಕಾನುಭವಗಳ ಹೃದಯಂಗಮ ಸಂಗಮದಂತಿರುವ ಈ ವಚನಗಳಿಗೆ, ಸರ್ವತ್ರ ಸ್ವಾಗತ ದೊರೆಯಲೆಂದು ಹಾರೈಸುತ್ತೇನೆ.

೨] ಶ್ರೀ ಬಿ. ಎಸ್. ಕಲ್ಯಾಣಿ. "ಶರಣ" ಪತ್ರಿಕೆ, ಅಥಣಿ.

ಸರ್ವಜ್ಞನ ತ್ರಿಪದಿಗಳಲ್ಲಿ, ಸಮಾಜದ ಲೋಪದೋಷಗಳನ್ನು ತೋರಿಸಿದರೆ, ನೀವುಗಳು, ಆಧುನಿಕ ಸರ್ವಜ್ಞನ ಸ್ವರೂಪದಲ್ಲಿ, ನಿಮ್ಮ ವಚನಗಳ ಮೂಲಕ, ಎಲ್ಲವನ್ನೂ ಮತ್ತು ಎಲ್ಲರನ್ನೂ ಬಯಲಿಗೆಳೆದು, ಸಮಾಜದ ಅಭ್ಯುದಯಕ್ಕೆ ಮತ್ತು ವ್ಯಕ್ತಿವಿಕಾಸಕ್ಕೆ ಬಹುದುಪಕಾರ ಮಾಡಿರುವಿರಿ. ನಿಮ್ಮ ವಚನಗಳೆಲ್ಲವೂ, ನೀವು ಪ್ರಗತಿಪರ ವಿಚಾರವಾದಿ ಮತ್ತು ಮಾನವ ಧರ್ಮವಾದಿ ಎಂಬುದನ್ನು, ಎತ್ತಿ ತೋರಿಸುವ ಪ್ರತ್ಯಕ್ಷ ಉದಾಹರಣೆಗಳಾಗಿವೆ.

೩] ಶ್ರೀ ಜ. ಹೊ. ನಾರಾಯಣಸ್ವಾಮಿ, M.A; B.Com; B.L.
ವಕೀಲರು ಮತ್ತು ಹೆಸರಾಂತ ಸಾಹಿತಿಗಳು, ಹಾಸನ.

"ಕುಮಾರ ಕಕ್ಕಯ್ಯನ ವಚನಗಳು" ಮನುಕುಲ ಇರುವವರೆಗೂ ಇರುವ ಕೃತಿ. ತೀಕ್ಷ್ಣವಾಗಿ ತಿವಿದು ಎಚ್ಚರಿಸುತ್ತ, ಮಾನವ ಕುಲ ಕಳಂಕರಹಿತವಾಗಲು, ಹೃದಯದಲಿ ಸುಪ್ತವಾಗಿರುವ ದಿವ್ಯಶಕ್ತಿ ಜಾಗೃತವಾಗಿ, ವ್ಯಕ್ತಿತ್ವ ರೂಪಗೊಳ್ಳಲು ಸಹಕಾರಿಯಾಗಿದೆ.

ವಚನ ಪರಂಪರೆಗೆ, ಒಂದು ವೈಚಾರಿಕತೆಯ ಹೊಸ ಹೊಳಪನ್ನು ನೀಡಿದ್ದೀರಿ, ಇತಿಹಾಸವನ್ನು ನಿರ್ಮಿಸಿದ್ದೀರಿ, ನಿದು ನಿಮ್ಮ ತಪಸ್ಸಿನ ಫಲ, ಅಂತಃಕರಣದ ಕಳಕಳಿ ಪದಪದಗಳಲ್ಲಿ ಪುಟಿದಿದೆ. ದಾರಿ ತಪ್ಪದಂತೆ, ಮತಿಗೆ ಅಂಕುಶವಾಗಿ, ಮಾನವ ಪಥದಲ್ಲಿ ಮುನ್ನಡೆಸುತ್ತದೆ.

ಕುಮಾರ ಕಕ್ಕಯ್ಯನ ವಚನಗಳು

ಅಕ್ಷಮ್ಯ

ಜಾರಿಣಿ ತಾನು ಜಾರಿಣಿಯುಂದರೆ ।
ಅಪ್ಪರಮಟ್ಟಿಗಾದರೂ ಅವಳನ್ನು ಕ್ಷಮಿಸಬಹುದು ॥
ಜಾರಿಣಿ ತಾನು ಪತಿವ್ರತೆಯುಂದರೆ ।
ಪೊರಕೆಗಳೂ ಸಹ ಅವಳನ್ನು ಕ್ಷಮಿಸಲಾರವು ॥
ಲಂಚಬಡಕ ತಾನು ಲಂಚಬಡಕನೆಂದರೆ ।
ಅಪ್ಪರಮಟ್ಟಿಗಾದರೂ ಅವನನ್ನು ಕ್ಷಮಿಸಬಹುದು ॥
ಲಂಚಬಡಕ ತಾನು ಪರಿಶುದ್ಧನೆಂದರೆ ।
ಪಾದುಕೆಗಳೂ ಸಹ ಅವನನ್ನು ಕ್ಷಮಿಸಲಾರವೆಂದ ಕುಮಾರ ಕಕ್ಕಯ್ಯ ॥
(ಕು. ಕ. ವ-೧೨)

ಅಗಣಿತ ಧರ್ಮಗಳು

ಭೂಮಿ ಇದೆ, ಅದಕ್ಕೆ ನಿರ್ದಿಷ್ಟ ಗತಿಯುಂಟು ।
ನೀರು ಇದೆ ಅದಕ್ಕೆ ನಿರ್ದಿಷ್ಟ ಪರಿವರ್ತನೆಯುಂಟು ॥
ಕಾಲ ಇದೆ ಅದಕ್ಕೆ ನಿರ್ದಿಷ್ಟ ಋತುಮಾನಗಳುಂಟು ।
ಗಾಳಿ ಇದೆ ಅದಕ್ಕೆ ನಿರ್ದಿಷ್ಟ ಭ್ರಮಣವುಂಟು ॥
ಸ್ಥಿತಿಗತಿಯಿಲ್ಲದ ಅಗಣಿತ ಜಾತಿ ಧರ್ಮಗಳು ।
ದೇವನ ಅಸ್ತಿತ್ವಕ್ಕೆ ಮಸಿಬಳಿದವೆಂದ ಕುಮಾರ ಕಕ್ಕಯ್ಯ ॥
(ಕು. ಕ. ವ-೧೩)

ಅತಿಮೂಟ

ನಿರಾಶೆ ಕೆಲವರನ್ನು ಹಾಳು ಮಾಡಿದರೆ ।
ಅತಿಯಾಶೆ ಬಹಳ ಜನರನ್ನು ಹಾಳು ಮಾಡುವದು ॥
ಬಡತನ ಕೆಲವರನ್ನು ನೀತಿಗೆಡಿಸಿದರೆ ।
ಸಿರಿತನ ಬಹಳ ಜನರನ್ನು ನೀತಿಗೆಡಿಸುವದು ॥
ಹಸಿವೆ ಕೆಲವರನ್ನು ಸಾಯಿಸಿದರೆ ।
ಅತಿಮೂಟ ಬಹಳ ಜನರನ್ನು ಸಾಯಿಸುವದೆಂದ ಕುಮಾರ ಕಕ್ಕಯ್ಯ ॥
(ಕು. ಕ. ವ-೧೮)

ಅದೃಷ್ಟ

ಓದಿದವನು ಜ್ಞಾನಿಯಾದರೆ ।
ಓದದವನು ಆಗುವನು ಅಜ್ಞಾನಿ ॥
ಸಂಪಾದಿಸಿದವನು ಸುಖಿಯಾದರೆ ।
ಸಂಪಾದಿಸದವನು ಆಗುವನು ದುಃಖಿ ॥
ಪ್ರಪಂಚದಲಿ ಯಾವವೇ ಅದೃಷ್ಟಗಳಿಲ್ಲ ।
ಕರ್ತವ್ಯಗಳುಂಟೆಂದ ಕುಮಾರ ಕಕ್ಕಯ್ಯ ॥ (ಕು. ಕ. ವ-೨೦)

ಬಸವ ತತ್ತ್ವ ತರಬೇತಿ ಕಮ್ಮಟ

ಪ್ರತಿವರ್ಷದ ಅಕ್ಟೋಬರ ತಿಂಗಳಲ್ಲಿ ಬಸವ ತತ್ತ್ವದ ತರಬೇತಿ ಕಮ್ಮಟ (ಶಿಬಿರ)ವು ಬೆಂಗಳೂರು ಸನಿಹದ ಬಸವ ಗಂಗೋತ್ರಿಯಲ್ಲಿ ನಡೆದು ಬರುತ್ತಿದೆಯಷ್ಟೆ. ಬಹಳ ಜನ ಶರಣ ಬಂಧುಗಳ ಅಪೇಕ್ಷೆಯ ಮೇರೆಗೆ ಈ ಸಲ ಕೂಡಲ ಸಂಗಮದ ಮಹಾಮನೆ ಮಹಾಮಠದಲ್ಲಿ ನಡೆಯಲಿದೆ. ಬಸವ ಧರ್ಮಪೀಠ ಮತ್ತು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್‌ಗಳ ಸಂಯುಕ್ತ ಆಶ್ರಯದಲ್ಲಿ ನಡೆಯಲಿರುವ ಶಿಬಿರವು ಅಕ್ಟೋಬರ್ 8 ರಿಂದ 17ರ ವರೆಗೆ 10 ದಿವಸಗಳ ಕಾಲ ನಡೆಯಲಿದೆ. ಹಿಂದಿನ ಕಲ್ಯಾಣ ಕಿರಣದಲ್ಲಿ ದಿನಾಂಕ 3 ರಿಂದ 13 ಎಂದು ತಿಳಿಸಲಾಗಿತ್ತು. ಶಿಬಿರ ಶಿಕ್ಷಕರ ಬೇಡಿಕೆಯ ಮೇರೆಗೆ ದಿನಾಂಕಗಳಲ್ಲಿ ಬದಲಾವಣೆ ಮಾಡಲಾಗಿದೆ. ದಿ 16 ಮತ್ತು 17 ರಂದು ಭಕ್ತಿಪಕ್ಷ ಸಮ್ಮೇಳನವು ಇರುತ್ತದೆ.

1. 8-10-1993 ರಿಂದ 17-10-1993 ರ ಅವಧಿಯೊಳಗಣ ಶಿಬಿರ ಶುಲ್ಕವು ಪ್ರತಿಯೊಬ್ಬರಿಗೆ 150 ರೂಗಳು.
2. ವಿದ್ಯಾರ್ಥಿಗಳಿಗೆ (ಅವರ ಶಾಲೆ-ಕಾಲೇಜುಗಳ ಪ್ರಾಂಶುಪಾಲರಿಂದ ವಿದ್ಯಾರ್ಥಿ ಎಂಬ ದೃಢೀಕರಣ ಪತ್ರ ತಂದರೆ 100 ರೂ.
3. ಆರ್ಥಿಕ ಅನಾನುಕೂಲತೆ ಬಹಳವಿದ್ದು ಮೊದಲೇ ಪತ್ರ ಬರೆದು ಅನುಮತಿ ಪಡೆದು ಆಸಕ್ತಿ ಇರುವವರು ಉಚಿತವಾಗಿಯೂ ಭಾಗವಹಿಸಬಹುದು.
4. ಅಕ್ಟೋಬರ 16 ಮತ್ತು 17 ರಂದು ನಡೆಯುವ ಭಕ್ತಿಪಕ್ಷ ಸಮ್ಮೇಳನ ಶುಲ್ಕ 30 ರೂ.
5. ಸ್ವಯಂ ಪ್ರೇರಣೆಯ ದೇಣಿಗೆ ಕೊಡಲೂ ದಾನಿಗಳಿಗೆ ಅವಕಾಶ ಉಂಟು.
6. ಶಿಬಿರ ಶಿಕ್ಷಕರಾಗಿ ಬಸವಕುಮಾರ್ ಪಾಟೀಲ, ವಿಜಯಕುಮಾರ್, ಬಾಣೂರು ಚನ್ನಪ್ಪ, ಎನ್. ಬಸವರಾಜು, ಜಗದೀಶ ಹಾಗಲವಾಡಿ, ಯೋಗಪಟು ಕಟ್ಟೀಮನಿ ಇವರುಗಳು ಭಾಗವಹಿಸಲಿದ್ದಾರೆ.
7. ಧಾರ್ಮಿಕವಿಧಿ-ವಿಧಾನಗಳನ್ನು ಮಾಡಿಸುವ ತರಬೇತಿ, ಯೋಗಾಭ್ಯಾಸ ಸಮೂಹ ಮಾಧ್ಯಮಗಳ ಬಳಕೆ, ಸಂಘಟನಾ ಸೂತ್ರ ತರಬೇತಿ ಇರುವುದರಿಂದ ಪ್ರತಿಯೊಂದು ರಾಷ್ಟ್ರೀಯ ಬಸವ ದಳದವರು ಕನಿಷ್ಠ ಪಕ್ಷ ಇಬ್ಬರನ್ನಾದರೂ ಕಳಿಸಿ

ತರಬೇತಿ ಕೊಡಿಸಬೇಕು. ಎಷ್ಟು ಜನ ಹೆಚ್ಚು ಬಂದರೆ ಅಷ್ಟು ಒಳ್ಳೆಯದು.

ರಾಷ್ಟ್ರೀಯ ಬಸವ ದಳಗಳ ಪ್ರತಿನಿಧಿಗಳಾಗಿ ಬಂದರೂ ಆರ್ಥಿಕವಾಗಿ ಸಶಕ್ತರಿದ್ದವರು ಅವರವರ ಶುಲ್ಕ ಅವರೇ ಭರಿಸಬೇಕು. ಒಂದು ವೇಳೆ ಉತ್ತಮ ಕಾರ್ಯಕರ್ತರು ಆರ್ಥಿಕವಾಗಿ ಶಕ್ತರಿಲ್ಲದಿದ್ದರೆ ರಾಷ್ಟ್ರೀಯ ಬಸವ ದಳಗಳ ವತಿಯಿಂದ ಅವರ ಪ್ರತಿನಿಧಿ ಶುಲ್ಕ ಮತ್ತು ಗಾಡಿ ಖರ್ಚು ಭರಿಸಿ ಕಳಿಸಿ ಕೊಡಬೇಕು.

8. ಶಿಬಿರಾರ್ಥಿಗಳು ಹಾಸಿಕೊಳ್ಳಲು–ಹೊದ್ದುಕೊಳ್ಳಲು, ಮರೆಯದೆ ತರಬೇಕು. ವೈಯಕ್ತಿಕ ವಸ್ತುಗಳಾದ ಪೂಜಾ ಸಾಮಗ್ರಿ ಸೆಟ್, ತಟ್ಟೆ–ಲೋಟ, ತಂಬಿಗೆ ತಂದುಕೊಂಡರೆ ಒಳ್ಳೆಯದು, ಇಲ್ಲಿ ಕೊಡಲು ಸಾಧ್ಯವಾಗುವುದಿಲ್ಲ.

9. ರಾಷ್ಟ್ರೀಯ ಬಸವ ದಳಗಳು ಹೆಚ್ಚಿನ ಜನರನ್ನು ಪ್ರೇರೇಪಿಸಿ, ಶಿಬಿರಕ್ಕೆ ಕಳಿಸಿ ಕೊಡಬೇಕು.

10. ಶಿಬಿರಾರ್ಥಿಗಳು ತಪ್ಪದೆ ಮೊದಲ ದಿನದಿಂದ ಕಡೆಯ ದಿನದ ವರೆಗೆ ಶಿಬಿರದಲ್ಲಿ ಭಾಗವಹಿಸಬೇಕು. ಅನಿವಾರ್ಯವಾಗಿ ಒಂದೆರಡು ದಿನ ಕಾಲಾವಕಾಶ ಬೇಕಾದವರು ಅನುಮತಿ ಪಡೆಯಬೇಕು.

11. ಪೂಜ್ಯ ಶ್ರೀ ಬಸವಾನಂದ ಸ್ವಾಮೀಜಿ, ಪೂಜ್ಯ ಶ್ರೀ ಸದಾನಂದ ಪ್ರಭು ಸ್ವಾಮೀಜಿ, ಪ್ರವಚನ ಮಾಡಲಿದ್ದಾರೆ; ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಮತ್ತು ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸುತ್ತಾರೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಾನದಲ್ಲಿ ನಡೆಯುವ ಈ ಜ್ಞಾನದಾಸೋಹದ ವಿಶೇಷ ಪ್ರಯೋಜನವನ್ನು ಪಡೆದುಕೊಳ್ಳಬೇಕಾಗಿ ಕೋರುತ್ತೇವೆ.

ವ್ಯವಹರಿಸುವ ವಿಳಾಸ :

–ಸೋದರಿ ಜಯಮ್ಮ, ವ್ಯವಸ್ಥಾಪಕಿ.
ಬಸವ ಧರ್ಮ ಪೀಠ (ಟ್ರಸ್ಟ್)
ಮಹಾಮನೆ ಮಹಾಮಠ,
ಕೂಡಲ ಸಂಗಮ–587115
ತಾ–ಹುನಗುಂದ, ಜಿಲ್ಲ–ಬಿಜಾಪುರ

ದಾನಿಗಳಲ್ಲಿ ಕೋರಿಕೆ

ಬಸವ ತತ್ತ್ವ ತರಬೇತಿ ಕಮ್ಮಟವು ಕಾರ್ಯಕರ್ತರನ್ನು ರೂಪಿಸುವ ಶಿಬಿರ. ಆರ್ಥಿಕವಾಗಿ ಸಶಕ್ತವಾಗಿರುವ ಶರಣ ಬಂಧುಗಳು ಪ್ರತಿನಿಧಿ ಶುಲ್ಕವನ್ನು ಸ್ವಯಂ ಪ್ರೇರಣೆಯಿಂದ ಕೊಡುವರು. ಕೆಲವು ಉತ್ತಮ ಕಾರ್ಯಕರ್ತರು ಆರ್ಥಿಕವಾಗಿ ದುರ್ಬಲವಿರುವುದರಿಂದ ಅವರಿಗೆ ಉಚಿತವಾಗಿಯೇ ಪ್ರವೇಶ ನೀಡಬೇಕಾಗುವುದು ಅನಿವಾರ್ಯವಾಗುತ್ತದೆ. ಶಿಬಿರಕ್ಕಾಗಿ ವಿಶೇಷವಾಗಿ ದೇಣಿಗೆ ಸಂಗ್ರಹಿಸಲಾಗುವುದಿಲ್ಲ. ಮುಂದೆ ಶರಣ ಮೇಳ ಇರುವುದರಿಂದ ಶಿಬಿರಕ್ಕಾಗಿ ದೇಣಿಗೆ ಸಂಗ್ರಹಿಸುವುದಿಲ್ಲ, ಹೀಗಾಗಿ ಸಂಸ್ಥೆಯ ಮೇಲೆಯೇ ಹೆಚ್ಚಿನ ಭಾರಬೀಳುತ್ತದೆ. ಶರಣ ಕಾರ್ಯಕರ್ತರನ್ನು ರೂಪಿಸುವುದು ಅತ್ಯಗತ್ಯವಾಗಿರುವುದರಿಂದ ಆರ್ಥಿಕ ಹೊರೆಯನ್ನು ಲಕ್ಷಿಸದೆ ಶಿಬಿರವನ್ನು ಏರ್ಪಾಡು ಮಾಡಲಾಗುತ್ತದೆ. ಆದ್ದರಿಂದ ಈ ದಿಶೆಯಲ್ಲಿ ದಾನಿಗಳು ಸಹಾಯ ಮಾಡಲು ಮುಂದೆ ಬಂದರೆ ಲೇಸಾಗುವುದು.

ದಾನಿಗಳು ಸ್ವಯಂ ಪ್ರೇರಣೆಯಿಂದ ವೆಚ್ಚಕ್ಕೆಂದು ದೇಣಿಗೆಗಳನ್ನು ಕಳುಹಿಸಬಹುದು. ತಾವು ಬಂದಾಗಲೂ ತಂದುಕೊಡಬಹುದು. ಪ್ರತಿನಿಧಿ ಶುಲ್ಕವನ್ನಾಗಲೀ, ದೇಣಿಗೆಯನ್ನಾಗಲೀ ಕಳಿಸುವವರು ಕೂಡಲ ಸಂಗಮದ ವಿಳಾಸಕ್ಕೆ ಕಳುಹಿಸಿಕೊಡಬೇಕು. ಉದಾರ ದಾನಿಗಳು ಸ್ವಯಂ ಪ್ರೇರಣೆಯ ದೇಣಿಗೆ ನೀಡಲು ಮುಂದಾಗುವರಾಗಿ ಆಶಿಸುತ್ತೇವೆ.

ಬೆಂಗಳೂರಿನ ರಾಜಾಜಿನಗರದಲ್ಲಿರುವ ಬಸವ ಮಂಟಪದಲ್ಲಿಯೂ ದೇಣಿಗೆ-ಶಿಬಿರ ಶುಲ್ಕ ನೀಡಿ ರಸೀತಿಯನ್ನು ಪಡೆಯಬಹುದು. ಶಿಬಿರಾರ್ಥಿಗಳು ಇಲ್ಲಿಗೆ ಬಂದಾಗ ಆ ರಸೀತಿಯನ್ನು ಮರೆಯದೆ ತಂದು ತೋರಿಸಬೇಕು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಗುರು ಪೌರ್ಣಿಮೆ

ಗುರುವಾರ ದಿ. 30-9-1993 ರಂದು

ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರ ದಿವ್ಯ ಆದೇಶದಂತೆ ಮಾಸಿಕ ಹುಣ್ಣಿಮೆ ಕಾರ್ಯಕ್ರಮ ನಡೆಯುತ್ತ ಸಾಗಿ ಬಂದಿದೆಯಷ್ಟೆ. ಕರ್ತವ್ಯ ನಿರತ ಜಗದ್ಗುರುಗಳು ಒಮ್ಮೆಯೂ ಹುಣ್ಣಿಮೆಯ ಜ್ಞಾನ ದಾಸೋಹದಲ್ಲಿ ಭಾಗಿಗಳಾಗಲು ಅನುವು ದೊರೆತಿಲ್ಲ. ಮುಂಬರುವ ಹುಣ್ಣಿಮೆಯನ್ನು ಪೂಜ್ಯ ಗುರುಗಳ ವರ್ಧಂತಿ ಆಚರಿಸಲು ನಿರ್ಧರಿಸಲಾಗಿತ್ತು, ಜ್ಞಾನ–ದಾಸೋಹ ಸಮಿತಿಯ ಕಾರ್ಯಾಧ್ಯಕ್ಷರಾದ ಶರಣ. ಜಿ. ಜಿ. ಪಾಟೀಲರು ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶರಣ. ನೀಲಪ್ಪಗೌಡರು ಕಟಗೂರು, ಪೂಜ್ಯ ಪೀಠಾಧೀಶರನ್ನು ಆಹ್ವಾನಿಸಿದ್ದು ಗುರುವಾರ ದಿ. 30-9-1993 ರಂದು ಪೂಜ್ಯರು ಕೂಡಲ ಸಂಗಮಕ್ಕೆ ಆಗಮಿಸಲಿದ್ದಾರೆ. ಪೂಜ್ಯರ 63 ನೆಯ ವರ್ಧಂತಿಯನ್ನು ಅಂದು ಸದ್ಭಕ್ತವೃಂದ ಆಚರಿಸಲಿದೆ.

ಹಡಪದ ಅಪ್ಪಣ್ಣನ ಹುಣ್ಣಿಮೆ

ಹಡಪದ ಅಪ್ಪಣ್ಣನವರು ಒಬ್ಬ ಮಹಾನ್ ಶರಣರು. ಗುರು ಬಸವಣ್ಣನವರನ್ನೇ ತಮ್ಮ ಪ್ರಾಣವನ್ನಾಗಿ ಭಾವಿಸಿದ ಅವರು ಕಡೆಯುವರೆಗೂ ಧರ್ಮಪಿತರನ್ನು ನೆರಳಿನಂತೆ ಹಿಂಬಾಲಿಸಿದರು. ಬಸವಣ್ಣನವರು ಲಿಂಗೈಕ್ಯರಾಗುವ ಪೂರ್ವದಲ್ಲಿ ತಾಯಿ ನೀಲಾಂಬಿಕೆಯನ್ನು ಕಲ್ಯಾಣದಿಂದ ಕರೆತರಲು ಹೋದ ಅಪ್ಪಣ್ಣನವರು ಹಿಂದಿರುಗಿ ಬಂದು ಕೃಷ್ಣಾನದಿಯ ಆಚೆಯ ದಡದಲ್ಲಿ ತಂಗಿದರು. ನದಿಯು ತುಂಬು ಪ್ರವಾಹದಿಂದಾಗಿ ದಾಟಲು ಅವರಿಗೆ ಸಾಧ್ಯವಾಗದಾಗ ಇತ್ತ ಬಸವಣ್ಣನವರು ಪಂಚಮಿಯಂದು ಬಯಲಾದರು. ಗುರು ಬಸವಣ್ಣನವರು ಲಿಂಗೈಕ್ಯರಾದ ಸುದ್ದಿ ತಿಳಿಯುತ್ತಲೇ ಇಚ್ಛಾಮರಣಿಯಾಗಿ ಲಿಂಗೈಕ್ಯಳಾದಳು ತಾಯಿ ನೀಲಾಂಬಿಕೆ. ಹಡಪದ ಅಪ್ಪಣ್ಣನವರೂ ಅಲ್ಲಿಯೇ ಲಿಂಗೈಕ್ಯರಾದರು. ಕೃಷ್ಣಾನದಿಯ ಆಚೆಯ ಬದಿಯಲ್ಲಿ ಹಡಪದ ಅಪ್ಪಣ್ಣನವರ ಸಮಾಧಿಯನ್ನು ಕಾಣಬಹುದು.

ಭಾದ್ರಪದ ಮಾಸದ ಪೌರ್ಣಿಮೆಯನ್ನು ಅಪ್ಪಣ್ಣ ಶರಣರ ಸಂಸ್ಮರಣೆಗಾಗಿ ಆಚರಿಸಲಾಯಿತು. ದಿ. 31-8-1993 ರಂದು ನಡೆದ ಹುಣ್ಣಿಮೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಗಂಗಾವತಿ ರಾಷ್ಟ್ರೀಯ ಬಸವ ದಳದ ಸಿ. ಹೆಚ್. ನಾರನಾಳರು, ಹುಬ್ಬಳ್ಳಿಯ ರಾಷ್ಟ್ರೀಯ ಬಸವ ದಳದ ಕಲ್ಯಾಣಪ್ಪ ಪರವಾದಿಯವರು ಭಾಗವಹಿಸಿದ್ದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪೂಜ್ಯ ಶ್ರೀ ಬಸವಾನಂದ ಸ್ವಾಮಿಗಳು ವಹಿಸಿದ್ದರು.

ಪ್ರತಿ ತಿಂಗಳೂ ಹುಣ್ಣಿಮೆ ಕಾರ್ಯಕ್ರಮ ಅಧಿಕಧಿಕ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸುತ್ತಿದ್ದು ಸ್ಥಳೀಯರು, ಸುತ್ತಲಿನ ಕಟಗೂರು, ಬಿಸಿಲದಿನ್ನಿ, ಹೂವನೂರು, ಕಜಗಲ್, ಕೆಂಗಲ್, ಗಂಜಾಳ ಗ್ರಾಮದವರು ಮಾತ್ರವಲ್ಲ, ಬಳ್ಳಾರಿ, ಹುಬ್ಬಳ್ಳಿ, ಗಂಗಾವತಿ, ಮೀರಜ್, ಶಿರಡೋಣ, ಸಿಂದಗಿ ರಾಷ್ಟ್ರೀಯ ಬಸವ ದಳಗಳವರು ಭಾಗವಹಿಸಿದುದು ಈ ಹುಣ್ಣಿಮೆಯ ವಿಶೇಷವಾಗಿತ್ತು. ಕಜಗಲ್-ಕೆಂಗಲ್ ಗ್ರಾಮದವರು, ಯಮುನಪ್ಪ ರೂಡಗಿ, ಪರಪ್ಪ ಗಾಣಿಗೇರ ಪ್ರಸಾದ ದಾಸೋಹದಲ್ಲಿ ಆರ್ಥಿಕವಾಗಿ ನೆರವು ನೀಡಿದರು.

ಬಸವ ಧರ್ಮ ಪೀಠ (ರಿ) ಕ್ಕೆ ವಿವಿಧ ಯೋಜನೆಗಳಿಗೆ ನೆರವು ನೀಡಿದವರ ಯಾದಿ

ಕಟ್ಟಡ ನಿಧಿಗೆ

ಶರಣರುಗಳಾದ :

೧.	ಶಂಕರ್ ಬಾಬು ಕೋರೆ, ಮೀರಜ	10001-00
೨.	ಲಕ್ಷ್ಮೀಬಾಯಿ ಈರಪ್ಪ ಐನಾಪುರೆ, ಶಿರಡೋಣ	5001-00
೩.	ಅಪ್ಪಾಸಾಹೇಬ ಎಸ್. ಆರ್. ಪಾಟೀಲ, ಜಯಸಿಂಗ್‌ಪುರ	5001-00
೪.	ಚಂಪಾಬಾಯಿ ಅವಟಿ, ಮೀರಜ	5001-00
೫.	ಮಲ್ಲಯ್ಯಸ್ವಾಮಿ ದತ್ತಾತ್ರೇಯಸ್ವಾಮಿ, ಈಚಲಕರಂಜಿ	5001-00
೬.	ಬಸವರಾಜ ಸಿದ್ಧಾರೂಢ ಹೋಳೀಕಟ್ಟೆ, ಮೈಂದರ್ಗಿ	5001-00
೭.	ಬಸಪ್ಪ ಶಿವಪ್ಪ ಬಿಂದಗಿ, ಮೀರಜ	5001-00
೮.	ಕೃಷ್ಣಾಜಿ ಬಾಬೂರಾಂ ಮಗದುಮ್, ವಡ್ಡಿ	5001-00
೯.	ಡಾ॥ ಮಾಲತಿಬಾಯಿ ಆನಂದರಾವ ಕರಾಳೆ, ಈಚಲಕರಂಜಿ	5001-00
೧೦.	ಮಹಾದೇವಪ್ಪ ಗುರುಸಿದ್ಧಪ್ಪ ಗಾಡವೆ, ಮೀರಜ	2001-00
೧೧.	ಇಂದುಮತಿ ರಾಮಗೊಂಡ ಪಾಟೀಲ, ತಾಕವಾಡೆ	2001-00
೧೨.	ಮಹಾದೇವಪ್ಪ ವಿರೂಪಾಕ್ಷಪ್ಪಚಿವಟೆ, ಮೀರಜ	2001-00
೧೩.	ಬಾಳಾಸಾಹೇಬ ಅಪ್ಪಣ್ಣ ಕುರನೆ, ಮೀರಜ	1501-00
೧೪.	ಸದಾಶಿವ ಅಣ್ಣಪ್ಪ ತಾಕವಾಡೆ, ಶಿರಡೋಣ	1001-00
೧೫.	ಶಿವರಾಂ ಮಾಯಪ್ಪ ಪಾನಧಾರೆ, ಶಿರಡೋಣ	1001-00
೧೬.	ಬಾಳಸಾಹೇಬ ತುರತುರೆ, ಮೀರಜ	1001-00
೧೭.	ರಾಮು ಗುರುಪಾದ ಮಗದುಮ್, ಮೀರಜ	1001-00
೧೮.	ಶಿವ ಬಾ ಖಾಂಡಪ್ಪ ಮಗದುಮ್, ಮೀರಜ	1001-00

ದಾಸೋಹ ನಿಧಿಗೆ 1111-00 ರೂ. ಕೊಟ್ಟವರು

ಕ್ರ.ಸಂ.	ಹೆಸರು	ಊರು
	ಶರಣರುಗಳಾದ :	
1409	ಕೊಟ್ರವ್ವಾ ರುದ್ರಗೌಡ ಪಾಟೀಲ	ಗುತ್ತಲ
1410	ನಾಗವ್ವಾ ವೀರಭದ್ರಪ್ಪ ಮೋರಗೇರಿ	ಗುತ್ತಲ
1411	ಚಂದ್ರಶೇಖರಯ್ಯ ಚನ್ನಯ್ಯ ಚಿಕ್ಕಮಠ	ಗುತ್ತಲ

1412	ಬಸವರಾಜಪ್ಪ ಚನ್ನಬಸಪ್ಪ ಅಂಗಡಿ	ಗುತ್ತಲ
1413	ಅಣ್ಣಪ್ಪ ತಾತೂಬ ಕೋರೆ	ಶಿರಡೋಣ
1414	ಅಪ್ಪಾ ಸೋ. ತಮ್ಮಣ್ಣ ಕೊರಬು	ಶಿರಡೋಣ
1415	ರತ್ನಾಬಾಯಿ ನರಸು ಕೋರೆ	ಶಿರಡೋಣ
1416	ಶಾಂತಾದೇವಿ ಜಯಂತ್ ಚಗುಲೆ	ಶಿರಡೋಣ
1417	ಭಾಗೂಬಾಯಿ ಗಿರಪ್ಪ ಹೆರವಾಡೆ	ಶಿರಡೋಣ
1418	ಶಿವಗೊಂಡ ಸಾತಗೊಂಡ ಪಾಟೀಲ	ತಾಕವಡೆ
1419	ಕಲ್ಲಪ್ಪ ಅಪ್ಪಣ್ಣ ಬೆಬ್ಡೆ	ಶಿರಡೋಣ
1420	ಮನೋಹರ್ ಶಿರ್ಸೆ	ಶಿರಡೋಣ
1421	ಶಂಕರಬಾಬು ಕೋರೆ	ಮೀರಜ್
1422	ಸುಭಾಷ್‌ಚಂದ್ರ ಪರಪ್ಪ ಸಾಯಿಗಾಂವ	ಮೀರಜ್
1423	ಗಣಪತಿ ಅಂಜಲಿ ಜೋಗುಳೇಕರ್	ಮೀರಜ್
1424	ವೀರಸಂಗಪ್ಪ ರುದ್ರಪ್ಪ ಅಂಗಡಿ	ಸಾಂಗಲಿ
1425	ದಾಕ್ಷಾಯಣಿ ದುಂಡಪ್ಪ ಸಿಂಧಗಿ	ಮೀರಜ್
1426	ಮಹಾದೇವಿ ಕಲ್ಲಪ್ಪ ತನಂಗೆ	ಮೀರಜ್
1427	ಬಸಪ್ಪ ಶಿವಪ್ಪ ಬಿಂದಗಿ	ಮೀರಜ್
1428	ಓಂಕಾರಪ್ಪ ವಿರುಪಾಕ್ಷಪ್ಪ ಮುಳವಾಡೆ	ಮೀರಜ್
1429	ರುದ್ರಪ್ಪ ಕವಳಿಕಟ್ಟಿ	ಈಚಲಕರಂಜಿ
1430	ಅನ್ನಪೂರ್ಣ ಅಣ್ಣಾಸಾಹೇಬ ಶೆಟ್ಟಿ	ಮೀರಜ್
1431	ಸಂಗಪ್ಪ ಬಾಬು ಕಬಾಡೆ	ಮೀರಜ್
1432	ಶ್ರೀಶೈಲಪ್ಪ ಬಸಪ್ಪ ಈಚಲಕರಂಜಿ	ಮೀರಜ್
1433	ನಾಗೂಬಾಯಿ ಶಂಕರ ಹರಗೆ	ಮೀರಜ್
1434	ಶಿವಮೂರ್ತಿ ನರಸಪ್ಪ ಫಲ್ಲೆ	ಗಣೇಶವಾಡಿ
1435	ಸುರೇಶ ವಿಶ್ವನಾಥ ಲಕಡೆ	ಮೀರಜ್
1436	ಅಪ್ಪಾಸಾಹೇಬ ಬಸಗೊಂಡ ಪಾಟೀಲ್	ಟಾಕವಡೆ
1437	ವೀರಗೊಂಡ ಅಣ್ಣಾಪಾಟೀಲ್	ಟಾಕವಡೆ
1438	ಪ್ರಕಾಶ ಶಿವಗೊಂಡ ಪಾಟೀಲ್	ಟಾಕವಡೆ
1439	ಅಣ್ಣಾಸಾಹೇಬ ಬಾಪು ಪಾಟೀಲ್	ಟಾಕವಡೆ
1440	ಶ್ರೀಮತಿ ಶಿವಗೊಂಡ ಪಾಟೀಲ್	ಟಾಕವಡೆ

1441	ಮಲ್ಲಯ್ಯಸ್ವಾಮಿ ದತ್ತಾತ್ರೇಯ ಸ್ವಾಮಿ	ಈಚಲಕರಂಜಿ
1442	ಸಂಗಪ್ಪ ಚನ್ನಪ್ಪ ಶೆಟ್ಟರ	ಹುಬ್ಬಳ್ಳಿ
1443	ಕಾಶಿನಾಥ ಬಾಲಪ್ಪಾ ಹಳೀಮನಿ	ಮುಧೋಳ

ಫ್ಯಾನ್ ಖರೀದಿಗೆ ನೆರವು ನೀಡಿದವರು

ಅಕ್ಕನಾಗಲಾಂಬಿಕಾ ಶರಣ ಧಾಮವು ಹಲವಾರು ದಾನಿಗಳ ನೆರವಿನಿಂದ ಸಿದ್ಧವಾಗಿದೆ. ಇದು ಉಷ್ಣದೇಶವಾದ್ದರಿಂದ ಕೋಣೆಗಳಲ್ಲಿ ಫ್ಯಾನ್ ಹಾಕಿಸುವುದು ಅವಶ್ಯವಿದೆ. ಆದ್ದರಿಂದ ಫ್ಯಾನ್, ಒಂದು ಕುರ್ಚಿ-ಹೀಗೆ ಸುಮಾರು 1000 ರೂ. ಸಾಮಗ್ರಿಗಳಿಗೆ ನೆರವು ನೀಡಿರಿ ಎಂದು ಸೂಚನಾ ಪತ್ರ ಕಳಿಸುತ್ತಲೇ 1000 ರೂ ಕಳಿಸಿಕೊಟ್ಟ ದಾನಿಗಳ ಯಾದಿ ಹಿಂದಿನ ಸಂಚಿಕೆಯಲ್ಲಿ ಕೊಡಲಾಗಿದೆ. ನಂತರ ಕೊಟ್ಟವರು :

ಕ್ರ.ಸಂ.	ಹೆಸರು	ಊರು
	ಶರಣರುಗಳಾದ :	
10	ಶಂಕರ್ ದುಂಡಪ್ಪ ಭಂಗಾರಿ,	ಸಂಕೇಶ್ವರ
11	ಡಾ॥ ಚೆಂಗಲಪ್ಪ, ಪನರೂಟಿ,	ತಮಿಳುನಾಡು
12	ಆರ್. ಬಿ. ಹೆಬ್ಬಳ್ಳಿ, ಡೊಂಬಿವೇಲಿ,	ಬಾಂಬೆ
13	ಮೆ॥ ಮಿತ್ರಾ ಫೈನಾನ್ಸ್ ಕಾರ್ಪೊರೇಷನ್,	ಬೆಂಗಳೂರು
14	ಜೆ. ಬಸಪ್ಪ,	ಗಂಗಾವತಿ

ವಿ. ಸೂ : ಈ ಯೋಜನೆಗೆ ಹಣ ಕೊಟ್ಟೂ ಸಹ, ಹೆಸರು ಮುದ್ರಣಗೊಂಡಿಲ್ಲದೆ ಇದ್ದರೆ ತಕ್ಷಣ ನಮ್ಮ ಗಮನಕ್ಕೆ ತರಬೇಕು.

ಪುಸ್ತಕ ಪ್ರಕಟಣೆಗಾಗಿ [ವಿಶ್ವಕಲ್ಯಾಣ ಮಿಷನ್]

ಶರಣರುಗಳಾದ :

೧.	ರಾಜಗೊಂಡ ಶಂಕರ ಪಾಟೀಲ, ತಾಕವಾಡೆ	6001-00
೨.	ಅಣ್ಣಾಸಾಹೇಬ, ಅಪ್ಪಾಸಾಹೇಬ ಪಾನಧಾರೆ, ಶಿರಡೋಣ	3005-00

ಈ ಎಲ್ಲ ದಾಸೋಹಿಗಳಿಗೆ ಸೃಷ್ಟಿಕರ್ತನಾದ ಪರಮಾತ್ಮನು ಮತ್ತು ವಿಶ್ವಗುರು ಬಸವಣ್ಣನವರು ಆಯುರಾರೋಗ್ಯಭಾಗ್ಯ ಸಕಲ ಸಂಪದವನ್ನು ಕರುಣಿಸಲೆಂದು ಹಾರೈಸುವೆವು.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ವಿಶ್ವ ಧರ್ಮ ಪ್ರವಚನ

ಭಾಗ – 2, ಅಧ್ಯಾಯ – 20

ಅನುಭವ ಮಂಟಪ

[1993 ಅಗಸ್ಟ್ ಸಂಚಿಕೆಯಿಂದ ಮುಂದುವರಿದುದು]

ಅನುಭವ—ಅನುಭಾವ—ಅನುಭೂತಿ

ಅನುಭೂತಿ ಎಂಬ ಪದವು ಸಹ ಬಳಕೆಯಾಗುತ್ತಿರುತ್ತದೆ. 'ಅನುಭೂತಿ' ಎಂಬ ಪದದ ಅರ್ಥವನ್ನು ವ್ಯಾಪ್ತಿಯನ್ನು ತಿಳಿದರೆ ಈ ಅಧ್ಯಾಯವು ಪೂರ್ತಿಯಾಗುತ್ತದೆ. ಅನುಭವ ಎಂಬ ಪದವನ್ನು ಸಾಮಾನ್ಯವಾದ, ಇಂದ್ರಿಯ ಜನ್ಯ ಅನುಭವಗಳಿಗೆ ಪ್ರಯೋಗಿಸಲಾಗುತ್ತದೆ. ಬಹಿರಿಂದ್ರಿಯಗಳ ಮೂಲಕ ಪ್ರವೇಶಿಸುವ ಸ್ಪಂದನಗಳನ್ನು ಇಲ್ಲಿ ಪ್ರಧಾನವಾಗಿ ಇಟ್ಟುಕೊಳ್ಳಲಾಗುತ್ತದೆ. ಇದಕ್ಕೆ ಅತೀತವಾದ ಆಧ್ಯಾತ್ಮಿಕ ಅನುಭವಕ್ಕೆ ಅನುಭಾವ ಎನ್ನಲಾಗುವುದು. ಅನುಭಾವವು ಅತೀಂದ್ರಿಯಾನುಭವ; ಅನುಭವ ಇಂದ್ರಿಯ ಆಧಾರಿತವಾಗಿದ್ದರೆ, ಅನುಭಾವವು 'ಇಂಟ್ಯೂಯಿಷನ್'— ಅಂತರ್‌ಪ್ರಜ್ಞಾ ಪ್ರೇರಿತವಾಗಿರುತ್ತದೆ.

ಅನುಭೂತಿಯು ಒಂದು 'ಸ್ಥಿತಿ'ಯನ್ನು ಕುರಿತು ಪ್ರತಿಪಾದಿಸುತ್ತದೆ. 'ಅನುಭಾವ'ದ ಸ್ಥಿತಿಯು ಅಂಗವು - ಲಿಂಗವೇ ಆದ ಭಾವಸಮರಸದ ಸ್ಥಿತಿ. ಪೂಜ್ಯ-ಪೂಜಕ-ಪೂಜೆಯ ತ್ರಿಪುಟಿಯಳಿದ ತಾದಾತ್ಮ್ಯಭಾವದ ಸ್ಥಿತಿ. ಈ ಅನುಭಾವದ ಸ್ಥಿತಿ ಆಗಾಗ ಬಂದು ಹೋಗದೆ ಸ್ಥಿರವಾಗಿ ನೆಲೆಸಿದುದೇ ಅನುಭೂತಿ. ಉಂಡ ಬಳಿಕ ಒಂದು ತೃಪ್ತಿಯುಂಟಾಗುವುದು, ಬಾಯಾರಿ ನೀರು ಕುಡಿದಾಗ ಒಂದು ಬಗೆಯ ತೃಪ್ತಿಯಾಗುವುದು. ಅದೇ ರೀತಿ ದಿವ್ಯಾನುಭವಗಳಾದಾಗ ಅದರ ಪರಿಣಾಮವಾಗಿ ಒಂದು ತೃಪ್ತಿ ಉಂಟಾಗುವುದು. ಈ ತೃಪ್ತಿ ಪರಮತೃಪ್ತಿ ; ಇದು ಆಳವಟ್ಟ ಮಾನಸಿಕ ಸ್ಥಿತಿಯೇ ಅನುಭೂತಿ. ಒಂದು ಜಾಮೂನು ಕರಿದು ಸಕ್ಕರೆ ಪಾಕದಲ್ಲಿ ಹಾಕುತ್ತೇವೆ. ಅದು ಸ್ವಲ್ಪ ಸ್ವಲ್ಪ ಆ ಪಾಕವನ್ನು ಕುಡಿದು, ನಂತರ ಅದನ್ನು ತನ್ನ ಸರ್ವಾಂಗದಲ್ಲೂ ತುಂಬಿಕೊಳ್ಳುತ್ತದೆ. ಹಾಗೆ ಶರಣನು ಸ್ವಲ್ಪ ಸ್ವಲ್ಪ ಆನಂದವನ್ನು ಪಡೆಯುತ್ತ, ಅದರಲ್ಲಿಯೇ ತನ್ಮಯನಾಗುವ ಸ್ಥಿತಿಯೇ ಅನುಭೂತಿ.

1. **ಅನುಭಾವದ ಸಾರವೇ** ನಿಜಸಾರವಾಗಿ
   ನಿಂದನೆಮ್ಮ ಬಸವಣ್ಣ —ನೀಲಾಂಬಿಕೆ
2. ಕಾಮಸಂಗ ನಿಸ್ಸಂಗವಾಗಿ **ಅನುಭಾವ ಸಂಗದಲ್ಲಿ** ಉಳಿದವರ
   ಅಗಲಲಾರೆನು. —ಬಸವಣ್ಣ

3. ಗುಹೇಶ್ವರಾ ನಿಮ್ಮ ಶರಣ
   ಅನುಭಾವದ ಅನುವಿನಲ್ಲಿ ಅನುಪಮ ಸುಖಿ. —ಅಲ್ಲಮಪ್ರಭು
4. ಅರಿವಿನ ತೃಪ್ತಿಗೆ **ಅನುಭಾವವೇ** ಆಶ್ರಯ —ಬಸವಣ್ಣ

ಈ ಎಲ್ಲ ಪದಗಳು 'ಅನುಭಾವ' ಎಂದರೆ ದಿವ್ಯವಾದ ಅತೀಂದ್ರಿಯ ಆಧ್ಯಾತ್ಮಿಕ ಅನುಭವ ಎಂದೂ, ಅದೇ ಅನುಭವವನ್ನೂ ಸರ್ವಾಂಗದಲ್ಲಿಯೂ ಆಳವಟ್ಟ ಮಾನಸಿಕ ಸ್ಥಿತಿ (State) ಯೇ ಅನುಭೂತಿ ಎಂದು ಸ್ಪಷ್ಟಪಡಿಸುತ್ತವೆ. ಇದನ್ನು ಪುಷ್ಟೀಕರಿಸಲು ಡಾ|| ಆರ್. ಆರ್. ದಿವಾಕರ ಅವರ ಒಂದು ವಿವರಣೆಯನ್ನು ಉಲ್ಲೇಖಿಸಬಹುದು.

'ಭವ-ಭೂತಿ ಈ ಎರಡೂ ಶಬ್ದಗಳು 'ಭೂ-ಭವ್' ಎಂಬ ಕ್ರಿಯಾಪದದಿಂದಲೇ ಆದವುಗಳು. ಭವ ಎಂದರೆ ಆಗುವಿಕೆ, ಭೂತ ಅಂದರೆ ಆದುದು. ಆದದ್ದು ಭೂತಿ ಎಂದರೆ ಆಗಿ, ಹಾಗೆಯೇ ಆ ಸ್ಥಿತಿಯಲ್ಲಿ ಸ್ಥಿರವಾದುದು ಎಂದರ್ಥ. ಅನುಭೂತಿ ಎಂಬ ಶಬ್ದದ ಅರ್ಥವೇ ಸಿದ್ಧಸ್ಥಿತಿಯಲ್ಲಿ ಸ್ಥಿರತೆ ಎಂದಾಗುವುದು." ಎನ್ನುತ್ತಾರೆ ಡಾ|| ಆರ್. ಆರ್. ದಿವಾಕರರು.*

ಪ್ರಗತಿಪರ ಧರ್ಮ

ಅಧ್ಯಾಯ-21

ದಿವ್ಯಾನುಭಾವ-ಅನುಭೂತಿಯಂತಹ ಸಂಪೂರ್ಣ ದಾರ್ಶನಿಕ ತತ್ತ್ವವನ್ನು ಪ್ರತಿಪಾದಿಸಿ ತಕ್ಷಣವೇ ಪ್ರಗತಿಪರ ಧರ್ಮದಂತಹ ವೈಚಾರಿಕ (rational) ತತ್ತ್ವವನ್ನು ಕೈಗೆತ್ತಿಕೊಳ್ಳುವದು. ಹೊರನೋಟಕ್ಕೆ ಆತ್ಯಾಶ್ಚರ್ಯಕರವಾಗಿ ತೋರಬಹುದು—ಸಾಮಾನ್ಯ ಧಾರ್ಮಿಕರಿಗೆ. ಏಕೆಂದರೆ ಧರ್ಮವಂತಿಕೆಯೊಂದ ತಕ್ಷಣ ಅವೈಜ್ಞಾನಿಕ, ಮೂಢನಂಬಿಕೆಗಳ ಕಲ್ಪನೆ ಹುಟ್ಟಿಬರುವುದು, ವೈಚಾರಿಕತೆ ಎಂದ ತಕ್ಷಣ ನಾಸ್ತಿಕತೆಯ ಕಲ್ಪನೆ ಮೂಡಿಬರುವುದು ಭಾರತೀಯ (ಹಿಂದು)ರಲ್ಲಿ ತೀರಾ ಸ್ವಾಭಾವಿಕವಾಗಿದೆ. ಈ ಕಲ್ಪನೆಯನ್ನೇ ಅಲ್ಲಗಳೆಯುವಂತೆ ವಿಶ್ವಗುರು ಬಸವಣ್ಣನವರು ಪ್ರಗತಿಪರ ಧರ್ಮವನ್ನು ಪ್ರತಿಪಾದಿಸಿದರು. ಇದು ಶುದ್ಧದಾರ್ಶನಿಕತೆಯನ್ನು ಗರ್ಭೀಕರಿಸಿಕೊಂಡಿರುವುದೇ ಇದರ ವಿಶೇಷತೆ.

ಅನುಭವ ಮಂಟಪವು ಅಂದರೆ ಲಿಂಗಾಯತ ಧರ್ಮವು ಅಂದರೆ ಕ್ರಾಂತಿಯೋಗಿ ಬಸವಣ್ಣನವರು ಪ್ರತಿಪಾದಿಸಿದ್ದು ಪ್ರಗತಿಪರ ಧರ್ಮವನ್ನು. ಈ ರೀತಿ ನಾನು ಏಕೆ

---

*"ಶರಣರ ಅನುಭವ ಅನುಭಾವ ಅನುಭೂತಿ" ಡಾ || ಆರ್.ಆರ್. ದಿವಾಕರ ೧೯೭೬, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪುಟ ೩

ಒತ್ತಿ ಒತ್ತಿ ಹೇಳಿದ್ದೇನೆಂದರೆ, ಯಾವುದಾದರೊಂದು ವಿಷಯವನ್ನು ಅನುಭವ ಮಂಟಪವು ಪ್ರತಿಪಾದಿಸಿತು. ಎಂದರೆ, ಲಿಂಗಾಯತ ಧರ್ಮವು ಬೋಧಿಸಿತು ಎಂದರೆ ಆಗ ಅರ್ಥ ಮಾಡಿಕೊಳ್ಳಬೇಕಾದುದು ಏನೆಂದರೆ, ಇವುಗಳ ಕರ್ತೃ, ರೂಹಾರಿಯಾದ ಬಸವಣ್ಣನವರು ಪ್ರತಿಪಾದಿಸಿದ್ದು ಎಂದು ಅರ್ಥೈಸಬೇಕು. ಏಕೆಂದರೆ ಅನುಭವ ಮಂಟಪದ ಕಟ್ಟಡ ಯಾವುದೇ ಸಿದ್ಧಾಂತವನ್ನು ಪ್ರತಿಪಾದಿಸುವುದಿಲ್ಲ. ಅನುಭವ ಮಂಟಪದಲ್ಲಿ ನೂರಾರು ಶರಣರು ಅನೇಕ ವಿಚಾರಗಳನ್ನು ಪ್ರತಿಪಾದಿಸಿದರೂ ಈ ವಿಚಾರಗಳ ಮೂಲಪ್ರತಿ (mothertape) ಬಸವಣ್ಣನವರು. ಚಲನಚಿತ್ರದ ಹಾಡುಗಳನ್ನು ಧ್ವನಿಮುದ್ರಿಸುವಾಗ, ಅಥವಾ ಧ್ವನಿ ಸುರುಳಿ ಧ್ವನಿ ಮುದ್ರಿಸುವಾಗ ನಾವೊಬ್ಬ ನಿರ್ದೇಶಕನನ್ನು ಆಯ್ಕೆ ಮಾಡುತ್ತೇವೆ. ಆತನು ನಾವು ಕೊಟ್ಟ ಹಾಡುಗಳಿಗೆ ರಾಗ ಹಾಕುತ್ತಾನೆ, ಸ್ವರಗಳನ್ನು ಹೊಂದಿಸುತ್ತಾನೆ. ಈ ಸ್ವರ ವಿವರಣೆಯ ಪ್ರತಿಗಳನ್ನು ಎಲ್ಲ ವಾದ್ಯಗಾರರಿಗೆ, ಗಾಯಕರಿಗೆ ವಿತರಿಸುತ್ತಾನೆ. ನಿರ್ದೇಶಕನ ಸೂಚನೆಯಂತೆ ಎಲ್ಲರೂ ಒಟ್ಟಾಗಿ ನುಡಿಸಿ, ಹಾಡಿ ಒಂದು ಹಾಡನ್ನು ಧ್ವನಿಮುದ್ರಿಸುತ್ತಾರೆ.

ಅದೇ ರೀತಿ ಸೃಷ್ಟಿಕರ್ತನೆಂಬ ನಿರ್ಮಾಪಕನ (producer) ಇಚ್ಛೆ-ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರೆಂಬ ನಿರ್ದೇಶಕರು ಅನುಭವ ಮಂಟಪವೆಂಬ ಧ್ವನಿ ಮುದ್ರಣ ಆಲಯದಲ್ಲಿ ಬಸವ ಧರ್ಮ ಎಂಬುದನ್ನು ವಚನ ಸಾಹಿತ್ಯ ಎಂಬ ಟೇಪಿನ ಮೇಲೆ ಧ್ವನಿಮುದ್ರಿಸಿದರು. ಈ ವಾದ್ಯವೃಂದದಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸಿದರು ಇನ್ನಿತರ ಅಸಂಖ್ಯಾತ ಶರಣರು. ಹೀಗಾಗಿಯೇ ನಿರ್ದೇಶಕರಾದ ಬಸವಣ್ಣನವರಿಗೆ ಕೇಂದ್ರ ಸ್ಥಾನ, ಅತ್ಯುನ್ನತ ಮನ್ನಣೆ ಪಾತ್ರವಾಗಿದೆ. ಅವರ ವಿಚಾರಧಾರೆಯನ್ನು ಇನ್ನಿತರರು ಅರಗಿಸಿಕೊಂಡು ತಮ್ಮ ತಮ್ಮ ಮಾತುಗಳಲ್ಲಿ ಅಭಿವ್ಯಕ್ತಗೊಳಿಸುತ್ತಾರೆ.

ಲಿಂಗಾಯತ ಧರ್ಮವು ಪ್ರಗತಿಪರ ಧರ್ಮ (progressive) ಧರ್ಮಗಳಲ್ಲಿ ಎರಡು ಪ್ರಕಾರ, ಪೌರಾಣಿಕ ಮತ್ತು ಪ್ರಗತಿಪರ ಎಂಬುದಾಗಿ. ವ್ಯತ್ಯಾಸಗಳೇನೆಂಬುದನ್ನು ನೋಡೋಣ.

	ಪೌರಾಣಿಕ ಧರ್ಮ	ಪ್ರಗತಿಪರ ಧರ್ಮ
1.	ಶಬ್ದ ಪ್ರಮಾಣದ ಮೇಲೆ	ಅನುಭಾವ ಪ್ರಮಾಣದ ಮೇಲೆ
2.	ಪುರಾಣದ ಆಧಾರ	ತರ್ಕ ಮತ್ತು ತತ್ತ್ವದ ಆಧಾರ
3.	ಮತೀಯ ದೃಷ್ಟಿ	ಮಂತಿಯ ದೃಷ್ಟಿ
4.	ಮತಾಂಧತೆ	ಬೌದ್ಧಿಕ ಪ್ರಾಮಾಣಿಕತೆ
5.	ಕೂಪಮಂಡೂಕ ವೃತ್ತಿ (ಸಂಪ್ರದಾಯದಾಸ್ಯ)	ವಿಶಾಲ ದೃಷ್ಟಿ
6.	ಕರ್ಮ ಪ್ರಧಾನ	ಜ್ಞಾನ ಪ್ರಧಾನ
7.	ವಿಧಿವಾದ	ಪ್ರಯತ್ನವಾದ
8.	ಭೀತಿಯ ಮೇಲೆ	ಆತ್ಮವಿಶ್ವಾಸದ ಮೇಲೆ
9.	ನಂಬಿಕೆಯೇ ತಳಹದಿ	ವಿಚಾರ ವಿಮರ್ಶೆಯ ತಳಹದಿ
10.	ಅರ್ಥವಿಲ್ಲದ ಆಚರಣೆ	ಅರ್ಥಸಹಿತ ಆಚಾರ
11.	ಹೊರಗಿನ ವಿಧಿಗಳಿಗೆ ಒತ್ತು	ಆತ್ಮವಿಕಾಸದ ಕಡೆಗೆ ಗಮನ
12.	ತಾತ್ಕಾಲಿಕ	ಸಾರ್ವಕಾಲಿಕ
13.	ಸಂಪ್ರದಾಯ ಪಾಲನೆ	ಮಾನವ ಕಲ್ಯಾಣವೇ ಗುರಿ

ಧರ್ಮವು ಶ್ರದ್ಧೆ (belief) ಮತ್ತು ನಂಬಿಕೆ (faith) ಗಳ ಮೇಲೆ ನಿಂತುದು. ಎಲ್ಲ ಧರ್ಮಗಳಲ್ಲಿಯೂ ನಂಬಿಕೆ ಎನ್ನುವುದು ಇದ್ದೇ ಇರುತ್ತದೆ. ಆದರೆ ನಂಬಿಕೆ ಮತ್ತು ವೈಚಾರಿಕತೆಯ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ನಾವು ಯಾವುದನ್ನೇ ಆಗಲಿ ವರ್ಗೀಕರಿಸಬೇಕಾಗುವುದು. ಈ ದೃಷ್ಟಿಯಿಂದ ನೋಡಿ ಯಾವುದಾದರೊಂದನ್ನು ಉದಾಹರಣೆಯಾಗಿ ಇಟ್ಟುಕೊಂಡೇ ಮುಂದುವರಿಯಬೇಕಾಗುವುದು. ಪೌರಾಣಿಕ ಧರ್ಮಕ್ಕೆ ಉದಾಹರಣೆಯಾಗಿ ವೈದಿಕ ಧರ್ಮವನ್ನು, ಪ್ರಗತಿಪರ ಧರ್ಮಕ್ಕೆ ಉದಾಹರಣೆಯಾಗಿ ಬಸವ ಧರ್ಮವನ್ನು ಇಟ್ಟುಕೊಂಡು ವಿಚಾರದ ಪ್ರತಿಪಾದನೆಗೆ ತೊಡಗುವೆ.

ಕ್ರೈಸ್ತ–ಇಸ್ಲಾಂ ಧರ್ಮಗಳಲ್ಲಿ ಮೂಢನಂಬಿಕೆಗಳಿಲ್ಲವೋ ಎಂದು ಯಾರಾದರೂ ಪ್ರಶ್ನಿಸಬಹುದು, ಖಂಡಿತವಾಗಿಯೂ ಇವೆ. ಕನ್ನೆ ಮೇರಿಯಲ್ಲಿ ದೇವದೂತನಿಂದ ಏಸುವು ಹುಟ್ಟಿದ, ಶಿಲುಬೆಗೇರಿದ ನಂತರ ದೇಹಧಾರಿಯಾಗಿ ಸ್ವರ್ಗಾರೋಹಣ-(resurrection) ಅಂಥ ನಂಬಿಕೆಗಳು. ಕ್ರೈಸ್ತ-ಇಸ್ಲಾಂದ ಸೃಷ್ಟಿಯ ಕಲ್ಪನೆ ಸಹ ವಿಜ್ಞಾನವು ಒಪ್ಪದ ಸಿದ್ಧಾಂತ. ನಂಬಿಕೆಗಳ ಪ್ರಮಾಣವನ್ನು ಗಮನಿಸಿದರೆ ಅತಿ ಹೆಚ್ಚಿನ ಮೌಢ್ಯತೆ ಬರುವುದು ವೈದಿಕ ಧರ್ಮದಲ್ಲಿ. ನನಗೆ ಇಲ್ಲಿ ಸಹ ಒಂದು ವ್ಯತ್ಯಾಸ ಗುರುತಿಸಬೇಕು ಎನಿಸುತ್ತಿದೆ.

ಅದೆಂದರೆ ವೇದೋಕ್ತ ವೈದಿಕ ಧರ್ಮ ಮತ್ತು ಬ್ರಾಹ್ಮಣ ಧರ್ಮ ಎಂಬ ಪದಗಳನ್ನು ತಾತ್ತ್ವಿಕವಾಗಿ ಗುರುತಿಸುವ ಮೂಲಕ. ಇಂದು ಲಿಂಗಾಯತ ಸಮಾಜದಲ್ಲಿರುವ ಆಚರಣೆಗಳನ್ನು ನೋಡಿದರೆ ಯಾರ್ಯಾರೂ ಇದೊಂದು ಪ್ರಗತಿಪರ, ಸಮತಾವಾದಿ ಧರ್ಮ ಎಂದು ಹೇಳಲಾರರು. ಅಷ್ಟು ಸೈದ್ಧಾಂತಿಕ ವಿರೂಪ (ಕುರೂಪ) ತಾಳಿದೆ. ಅದೇ ರೀತಿ ಕೆಲವು ಜನ ಚಿಂತನ ಶೀಲರು ಪ್ರತಿಪಾದಿಸುದೇನೆಂದರೆ-ಉದಾ : ದಯಾನಂದ ಸರಸ್ವತಿಯವರು, ವೇದೋಪನಿಷತ್ತುಗಳು ಅತ್ಯಂತ ಪ್ರಗತಿಪರ, ಸಮತಾವಾದಿ ಧರ್ಮವನ್ನೇ ಪ್ರತಿಪಾದಿಸಿದವು ; ನಂತರ ಸಮಯ ಸಾಧಕರು ಆ ತತ್ತ್ವಗಳನ್ನು ರೂಪಗೆಡಿಸಿದರು ಎಂಬುದಾಗಿ. ಈ ವಾದ ಸರಿಯಿದ್ದರೂ ಇರಬಹುದು. ಎನ್ನಿಸುತ್ತದೆ ಬಸವಣ್ಣನವರ ಈ ಮಾತು ಕೇಳಿದಾಗ, **"ವೇದವೆಂಬುದು ನಿಮಗೆ ತಿಳಿಯದು."** ತಮ್ಮ ಹಿತವನ್ನು ಸಾಧಿಸಿಕೊಳ್ಳಬೇಕೆನ್ನುವ ಒಂದು ವರ್ಗ–ಪುರೋಹಿತ ವರ್ಗ–ಮೂಲ ತತ್ತ್ವಗಳನ್ನು ರೂಪಗೆಡಿಸಿರುವ ಸಾಧ್ಯತೆಯುಂಟು. ಆದ್ದರಿಂದ ವೈದಿಕ ಧರ್ಮ ಎಂದು ಬಳಸದೆ ಬ್ರಾಹ್ಮಣ ಧರ್ಮ ಎಂದು ಬಳಸಿ ಪೌರಾಣಿಕ ಮತ್ತು ಪ್ರಗತಿಪರ ಧರ್ಮಗಳ ವ್ಯತ್ಯಾಸವನ್ನು ಪ್ರತಿಪಾದಿಸುವೆ. (ಮುಂದುವರಿಯುವುದು)

"ರಾಷ್ಟ್ರೀಯತೆ, ಧಾರ್ಮಿಕತೆಗಿಂತ ಶ್ರೇಷ್ಠ–
ಈ ಅರ್ಥದಲ್ಲಿ ನಾವು ಮೊಟ್ಟ ಮೊದಲಿಗೆ ಭಾರತೀಯರು, ಅನಂತರ
ಹಿಂದುಗಳು, ಮುಸಲ್ಮಾನರು, ಪಾರ್ಸಿಗಳು ಮತ್ತು ಕ್ರಿಶ್ಚಿಯನ್ನರು."

47 ನೇ ಸ್ವಾತಂತ್ರ್ಯ ವರ್ಷ

—ಮಹಾತ್ಮ ಗಾಂಧಿ

ಕರ್ನಾಟಕ — ಸ್ವರಾಜ್ಯದ ನಿಜ ಅರ್ಥವನ್ನು ಸಾಧಿಸುವ ಯತ್ನದಲ್ಲಿ

ಜನಮನಕ್ಕೆ ಸ್ಪಂದಿಸುವ ಸ್ವಚ್ಛ ಆಡಳಿತ : ಪ್ರಗತಿಪರ ಕಾರ್ಯಕ್ರಮಗಳ ಫಲ ಸಮಾಜದ ಪ್ರತಿಹಂತಕ್ಕೂ ತಲುಪುವುದನ್ನು ಖಾತರಿಪಡಿಸಿಕೊಳ್ಳಲು, ಎಲ್ಲಾ ಹಂತಗಳಲ್ಲೂ ಭ್ರಷ್ಟಾಚಾರವನ್ನು ತೊಡೆದು ಹಾಕಲು ಮುಖ್ಯಮಂತ್ರಿಗಳು ಪಣ ತೊಟ್ಟಿದ್ದಾರೆ. ಜನರು ಅವರೊಂದಿಗೆ ನೇರವಾಗಿ ಸಂಪರ್ಕಿಸಿ ತಮ್ಮ ಸಮಸ್ಯೆಗಳಿಗೆ ಶೀಘ್ರ ಪರಿಹಾರ ದೊರಕಿಸಿಕೊಳ್ಳುವ ವ್ಯವಸ್ಥೆ ಇದೀಗ ಜಾರಿಗೆ ಬಂದಿದೆ.

ಆದ್ಯತಾ ಕ್ಷೇತ್ರಗಳು : ಕೈಗಾರಿಕೆ : ಈ ಕ್ಷೇತ್ರದಲ್ಲಿ ಮೊದಲ ಸ್ಥಾನ ಪಡೆಯಲು ರೂ 45,000 ಕೋಟಿ ಮೊತ್ತ ಹೂಡಿಕೆಯ ವಿಸ್ತರಣಾ ಕಾರ್ಯವನ್ನು ಹಮ್ಮಿಕೊಂಡಿದೆ.

ವಿದ್ಯುಚ್ಛಕ್ತಿ : ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ತೀವ್ರ ಪ್ರಯತ್ನ. ರಾಜ್ಯದ ವಾರ್ಷಿಕ ಯೋಜನಾ ವೆಚ್ಚದ ಶೇ 47 ರಷ್ಟು ಭಾಗ ವಿದ್ಯುಚ್ಛಕ್ತಿ ಹಾಗೂ ನೀರಾವರಿ ಯೋಜನೆಗಳಿಗೆ ಮೀಸಲು.

ವಿದ್ಯಾಭ್ಯಾಸ : ಕ್ಯಾಪಿಟೇಷನ್ ಶುಲ್ಕ ರದ್ದು, ಸಂಪೂರ್ಣ ಸಾಕ್ಷರತಾ ಆಂದೋಳನ, ಬೆಳ್ಳಿ ಬೆಳಕು, ಹಿಂದುಳಿದ ವರ್ಗದವರಲ್ಲಿ ಸಾಕ್ಷರತೆ ತರಲು ರೂ. 133 ಲಕ್ಷ ನೀಡಿಕೆ.

ಕೋಮು ಸೌಹಾರ್ದತೆ: ಜಾತೀಯತೆ ಹಾಗೂ ಕೋಮುವಾದಿ ಪದ್ಧತಿಗಳನ್ನು ಹತ್ತಿಕ್ಕಲು ಕ್ರಮ.

ಕನ್ನಡ ಜಾಗೃತಿ : 1993–94 ನೇ ಸಾಲಿನ "ಕನ್ನಡ ಜಾಗೃತಿ ವರ್ಷ"ವನ್ನಾಗಿ ಆಚರಿಸಿ, ಕನ್ನಡದ ಉದ್ಧಾರಕ್ಕಾಗಿ ವಿವಿಧ ಕಾರ್ಯಗಳನ್ನು ಹಮ್ಮಿಕೊಂಡಿದೆ.

ಪ್ರಜೆಗಳಿಗೇ ಪ್ರಭುತ್ವ : ಸಂವಿಧಾನದ 73 ನೇ ತಿದ್ದುಪಡಿ ಮಸೂದೆಯನ್ವಯ ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಪಂಚಾಯಿತಿ ರಾಜ್ಯ ವ್ಯವಸ್ಥೆಯನ್ನು ಜಾರಿಗೆ ತಂದಿರುವ ಕೀರ್ತಿ ಕರ್ನಾಟಕಕ್ಕೆ. ಅಧ್ಯಕ್ಷರುಗಳ ಸ್ಥಾನಗಳಿಗೆ ಪರಿಶಿಷ್ಟ ಜಾತಿ : ವರ್ಗದವರಿಗೆ ಹಾಗೂ ಇತರ ಹಿಂದುಳಿದ ವರ್ಗದವರಿಗೆ ಎಲ್ಲಾ ಹಂತಗಳಲ್ಲಿಯೂ ಮೀಸಲಾತಿ.

ಯುವಜನರಲ್ಲಿ ಕುಡಿತದ ಚಟವನ್ನು ಹತ್ತಿಕ್ಕಲು ಕಾರ್ಯಕ್ರಮ :

ಇತರ ಕಲ್ಯಾಣ ಕಾರ್ಯಕ್ರಮಗಳು : ನೆರಳಿನ ಭಾಗ್ಯ, – 'ಆಶಾಕಿರಣ' 'ಅಕ್ಷಯ' ಯೋಜನೆಯ ಪುನರ್ರಚನೆ – ಬಡ ಶಾಲಾ ಮಕ್ಕಳಿಗೆ ಹೆಚ್ಚು ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮ. 'ಆಶ್ರಯ'–

ನಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಬಲಿದಾನ — ಸರ್ವತ್ಯಾಗ ಮಾಡಿದ ಹುತಾತ್ಮರ ಕನಸನ್ನು ನನಸಾಗಿಸಲು ಕರ್ನಾಟಕ ಬದ್ಧ.

—ಕರ್ನಾಟಕ ವಾರ್ತೆ

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಕ್ರಾಂತಿ ದಿನದ ಅಂಗವಾಗಿ

ಶ ರ ಣ ಮೇ ಳ

1994 ನೆಯ ಜನವರಿ 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲಸಂಗಮದಲ್ಲಿ 1988ನೆಯ ಇಸವಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಮೂರುವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು. ತುಂಬಿನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವಕ್ರಾಂತಿ ದಿನ (ಮಕರ ಸಂಕ್ರಾಂತಿ)ದ ಅಂಗವಾಗಿ ನಡೆಯುಲಿದ್ದು ಏಳನೆಯ ಶರಣ ಮೇಳವು 1994ನೇ ಇಸವಿಯ ಜನವರಿ 12, 13, 14 ಮತ್ತು 15 ರಂದು ಏರ್ಪಾಟಾಗಲಿದೆ. ಹಲವಾರು ಪ್ರಮುಖ ಮಠಾಧೀಶರು, ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಧರ್ಮ ಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರ ಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರವೆಮಗೆ ಪ್ರಾಣಜೀವಾಳ

ಬೆಂಗಳೂರು ವಿಳಾಸ :
ಬಸವ ಮಂಟಪ, 2035,
2 ನೇ ಬ್ಲಾಕ್, ಕಾರ್ಡ್ ರಸ್ತೆ,
ರಾಜಾಜಿನಗರ, ಬೆಂಗಳೂರು–560010
ದೂರವಾಣಿ : 325335

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ–587115.
ತಾ–ಹುನಗುಂದ, ಜಿಲ್ಲೆ–ಬಿಜಾಪುರ
ದೂರವಾಣಿ : 838

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ತತ್ತ್ವಾನುಯಾಯಿಗಳ ಜಾಗತಿಕ ಉತ್ಸವವಾಗುವುದರಿಂದ ಎಲ್ಲೆಡೆಯಿಂದಲೂ ಜನರು ಸಹಸ್ರ ಸಹಸ್ರಗಟ್ಟಳೆ ಸಂಖ್ಯೆಯಲ್ಲಿ ಬರುವರು. ಆದ್ದರಿಂದ ಈ ಉತ್ಸವವು ವರ್ಷ ವರ್ಷಕ್ಕೂ ವ್ಯವಸ್ಥಿತವಾಗಿ ಜರುಗಬೇಕಾದರೆ ಸ್ವಯಂಪ್ರೇರಣೆಯ ಕೊಡುಗೆ ನೀಡಿರಿ.

1. ಮಹಾಪೋಷಕರು 5000 ರೂ ಮತ್ತು ಮೇಲೆ ಕೊಟ್ಟವರು.
2. ದಾನಿಗಳು 1000 ರೂ ಮತ್ತು ಮೇಲೆ ಕೊಟ್ಟವರು.
3. ಹಿತೈಷಿಗಳು 500 ರೂ.
4. ಸ್ವಾಗತ ಸಮಿತಿ ಸದಸ್ಯತ್ವ 125 ರೂ. (ಒಬ್ಬರಿಗೆ ಊಟ ವಸತಿ)
5. ಪ್ರತಿನಿಧಿ ಶುಲ್ಕ 100 ರೂ.

ಪ್ರತಿ ವರ್ಷವೂ ತಮ್ಮ ದೇಣಿಗೆಯು ಶರಣ ಮೇಳದಲ್ಲಿ ಸಲ್ಲಬೇಕು ಎನ್ನುವವರು 5000 ರೂ. ಗಳ ನಿಧಿಯನ್ನಿಟ್ಟು, ಆ ಪುದುವಟ್ಟಿನ ಬಡ್ಡಿ ನಿರಂತರವಾಗಿ ಬರುವಂತೆ ವ್ಯವಸ್ಥೆ ಮಾಡಲು ಯೋಜನೆಯಿದೆ. ವಿವರಗಳಿಗಾಗಿ ಸಂಪರ್ಕಿಸಿರಿ.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ" ಎಂದು ಬರೆದು ಕೂಡಲ ಸಂಗಮದ ವಿಳಾಸಕ್ಕೆ ಕಳಿಸಬೇಕು. ವಿಳಾಸ ಹಿಂದಿನ ಪುಟದಲ್ಲಿದೆ State Bank of India, Koodala Sangama ದ ಡ್ರಾಫ್ಟ್‌ಗಳನ್ನೇ ತೆಗೆಸಬೇಕು.

ಬಸವ ಧರ್ಮದ ಮಹಾಜಗದ್ಗುರು ಪೀಠ

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮದ ಮಹಾ ಜಗದ್ಗುರು ಪೀಠವು ಸ್ಥಾಪನೆಯಾಗಿದ್ದು, ಅನೇಕ ಧಾರ್ಮಿಕ, ಅಧ್ಯಾತ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಯಾತ್ರಾರ್ಥಿಗಳಿಗಾಗಿ ನಿತ್ಯ ದಾಸೋಹವನ್ನು ನಡೆಸುತ್ತಿದೆ. ಬಂದ ಪ್ರವಾಸಿಗಳು ಉಳಿದುಕೊಳ್ಳಲು ಮೂರು ಅಂತಸ್ತಿನ ಅತಿಥಿ ಗೃಹವನು ನಿರ್ಮಿಸಿದೆ. ಕೂಡಲಸಂಗಮವನ್ನು ಅಂತರರಾಷ್ಟ್ರೀಯ ಖ್ಯಾತಿಯ ಕ್ಷೇತ್ರವನ್ನಾಗಿ ರೂಪಿಸುವ ಯೋಜನೆ ಹೊಂದಿರುವುದೇ ಅಲ್ಲದೆ, ವಿವಿಧ ಭಾಷೆಗಳಲ್ಲಿ ಸಾಹಿತ್ಯವನ್ನು ಪ್ರಕಟಿಸುತ್ತಲಿದೆ. ಸಂಗಮ ಕ್ಷೇತ್ರದ ಮಹಾಮನೆ ಆವರಣದಲ್ಲಿ ಧಾರ್ಮಿಕ ಸಾಹಿತ್ಯ, ಶರಣರ ಭಾವಚಿತ್ರ, ಪ್ರವಚನ, ಭಕ್ತಿಗೀತೆಗಳ ಆಡಿಯೋ ಮತ್ತು ವೀಡಿಯೋ ಕೆಸೆಟ್ಟು